School Leadership

TESS India

# Transforming teaching-learning process: managing resources for effective student learning

# ಬೋಧನಾ-ಕಲಿಕಾ ಪ್ರಕ್ರಿಯೆನ್ನು ಪರಿವರ್ತಿಸುವುದು:ವಿದ್ಯಾರ್ಥಿಗಳ ಪರಿಣಾಮಕಾರಿ ಕಲಿಕೆಗೆ ಸಂಪನ್ಮೂಲಗಳ ನಿರ್ವಹಣೆ





Teacher Education through School-based Support in India
www.TESS-India.edu.in

http://creativecommons.org/licenses/

The Open University

UKaid from the British people

ಶಾಲಾ ನಾಯಕತ್ವಕ್ಕೆ ಸಂಬಂಧಿಸಿದ ಈ **ಮುಕ್ತ ಶೈಕ್ಷಣಿಕ ಸಂಪನ್ಮೂಲವೂ** (**Open Educational Resource-OER)** ಶಾಲೆಯಲ್ಲಿ ಬೋಧನೆ ಮತ್ತು ಕಲಿಕೆಯಲ್ಲಿ ಸುಧಾರಣೆ ತರುವ ಬಗ್ಗೆ ನಾಯಕತ್ವ ವಹಿಸಲು ಇಚ್ಛಿಸುವವರಿಗೆ, ಅದಕ್ಕೆ ಪೂರಕವಾಗಿ ಮಾಹಿತಿ ಹಾಗೂ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಸಹಾಯವಾಗುವಂತೆ **ಟೆಸ್-ಇಂಡಿಯಾ ಸಂಸ್ಥೆ** ರೂಪಿಸಿರುವ 20 ಘಟಕಗಳಲ್ಲಿ ಒಂದು. ಶಾಲೆಯಲ್ಲಿ ಶಿಕ್ಷಕರು, ವಿದ್ಯಾರ್ಥಿಗಳ ಹಾಗೂ ಇತರರ ಭಾಗವಹಿಸುವಿಕೆಯಿಂದ ನಡೆಸಬಹುದಾದ ಚಟುವಟಿಕೆಗಳನ್ನು ಒಳಗೊಂಡಿರುವ, ಅವಶ್ಯವಾಗಿ ಪ್ರಯೋಗಿಸಬಹುದಾದ ಘಟಕಗಳನ್ನು ಇದು ಹೊಂದಿದೆ. ಯಶಸ್ವಿ ಶಾಲೆಗಳಲ್ಲಿ ನಡೆಸಲಾದ ಶೈಕ್ಷಣಿಕ ಅಧ್ಯಯನ ಹಾಗೂ ಸಂಶೋಧನೆಗಳನ್ನು ಇದು ಆಧರಿಸಿದೆ.

ಈ ಘಟಕಗಳನ್ನು ಅಧ್ಯಯನ ಮಾಡಲು ಯಾವುದೇ ನಿರ್ದಿಷ್ಟ ಕ್ರಮ ಅನುಸರಿಸಬೇಕಿಲ್ಲವಾದರೂ, ಅನುಕೂಲಿಸುವವರಾಗಿ (enabler) **'ಶಾಲಾ ಮುಖ್ಯಸ್ಥ'** ಎಂಬ ಘಟಕದಿಂದ ಪ್ರಾರಂಭಿಸುವುದು ಸೂಕ್ತ. ಏಕೆಂದರೆ, ಇದು ಇಡೀ ಕೈಪಿಡಿಗೆ ಒಂದು ನಿರ್ದಿಷ್ಟ ನಿರ್ದೇಶನ ನೀಡುತ್ತದೆ. ಕೆಲವು ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ಘಟಕಗಳನ್ನು ಬೇರ್ಪಡಿಸಿ ಅಧ್ಯಯನ ಮಾಡಲು ನೀವು ಆಯ್ಕೆ ಮಾಡಿಕೊಳ್ಳಬಹುದು. **ರಾಷ್ಟ್ರೀಯ ಶಾಲಾ ನಾಯಕತ್ವದ ಪಠ್ಯಕ್ರಮದ ನೆಲೆಗಟ್ಟು (National School leadership Curriculum Framework-India)** ಗುರುತಿಸಿರುವ ಶಾಲಾ ನಾಯಕತ್ವದ ಯಥಾರ್ಥನ (1), ಸ್ವಯಂ ಅಭಿವೃದ್ಧಿ ಹಾಗೂ ನಿರ್ವಹಣೆ (2), ಬೋಧನೆ-ಕಲಿಕೆ ಪ್ರಕ್ರಿಯೆಗಳಲ್ಲಿ ಪರಿವರ್ತನೆ (3) ಹಾಗೂ ಪಾಲುದಾರಿಕೆಯಲ್ಲಿ ಅಗ್ರಗಾಮಿ (6)- ಈ ಪ್ರಮುಖ ಕ್ಷೇತ್ರಗಳನ್ನು ನಾವೀನ್ಯತೆ ಹಾಗೂ ತಂಡಗಳನ್ನು ಮುನ್ನಡೆಸುವುದಕ್ಕೆ ಸಂಬಂಧಿಸಿದ (4) ಮತ್ತು (5)ನೇ ಕ್ಷೇತ್ರಗಳನ್ನು ಕೇಂದ್ರೀಕರಿಸದೆ, ವಿವಿಧ ಘಟಕಗಳಲ್ಲಿ ಮಿಳಿತಗೊಳಿಸಲಾಗಿದೆ. ಕೆಲವು ಘಟಕಗಳಲ್ಲಿ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳನ್ನು ವಿವರಿಸಲಾಗಿದೆ.

ಶಾಲೆಯ ಮುಖ್ಯಸ್ಥರು ಈ ಘಟಕಗಳನ್ನು ಸ್ವಅಧ್ಯಯನಕ್ಕಾಗಿ ಇಲ್ಲವೇ ನಾಯಕತ್ವ ಬೋಧನೆ ಕಾರ್ಯಕ್ರಮದ ಭಾಗವಾಗಿ ಬಳಸಬಹುದು. ಎರಡೂ ವಿಧಾನಗಳಲ್ಲಿ ಚಟುವಟಿಕೆಗಳನ್ನು ಹಾಗೂ ವಸ್ತುಸ್ಥಿತಿ ಅಧ್ಯಯನಗಳನ್ನು ಹಾಗೂ ಕಲಿಕೆಯ ಅನುಭವಗಳನ್ನು ಇತರರೊಡನೆ ಹಂಚಿಕೊಳ್ಳುವ ದೃಷ್ಟಿಯಿಂದ, ವೈಯುಕ್ತಿಕವಾಗಿ ಒಂದು ಕಲಿಕಾ ಡೈರಿಯನ್ನು ಇಟ್ಟುಕೊಳ್ಳುವುದು ಉಪಯುಕ್ತವಾಗುತ್ತದೆ. ಇಲ್ಲಿ ಬಳಸಲಾಗಿರುವ **'ಶಾಲಾಮುಖ್ಯಸ್ಥ'** ಅಥವಾ **'ಶಾಲಾ ನಾಯಕ'** ಎಂಬ ಪದವು ಕೇವಲ ಮುಖ್ಯ ಶಿಕ್ಷಕ ಅಥವಾ ಪ್ರಿನ್ಸಿಪಾಲರು ಮಾತ್ರವಲ್ಲದೆ, ಶಾಲೆಯಲ್ಲಿ ನಾಯಕತ್ವದ ಜವಾಬ್ದಾರಿಯನ್ನು ಹೊರಲು ಸಿದ್ಧವಿರುವ ಯಾವುದೇ ವ್ಯಕ್ತಿಗೆ ಅನ್ವಯಿಸುತ್ತದೆ.

**ವೀಡಿಯೋ ಸಂಪನ್ಮೂಲಗಳು**

ಎಂಬ ಗುರುತು **ಟೆಸ್-ಇಂಡಿಯಾ** ನಾಯಕತ್ವದ ವೀಡಿಯೋ ಸಂಪನ್ಮೂಗಳನ್ನು ಸೂಚಿಸುತ್ತದೆ. ಇವುಗಳಲ್ಲಿ ಭಾರತೀಯ ಶಾಲೆಗಳ ಮುಖ್ಯಸ್ಥರು ತಮ್ಮ ಶಾಲೆಗಳಲ್ಲಿ ಬೋಧನೆ ಹಾಗೂ ಕಲಿಕೆಯಲ್ಲಿ ಬದಲಾವಣೆ ತರಲು ತಾವು ನಡೆಸಿದ ಪ್ರಯತ್ನಗಳ ಬಗ್ಗೆ ಹೇಳಿಕೊಂಡಿದ್ದಾರೆ. ಅಂಥದ್ದೇ ಕಾರ್ಯಕ್ರಮಗಳನ್ನು ನೀವೂ ಪ್ರಯೋಗಿಸುವ ನಿಟ್ಟಿನಲ್ಲಿ ಈ ವೀಡಿಯೊಗಳು ನಿಮಗೆ ಸ್ಫೂರ್ತಿ ನೀಡಬಹುದು ಎಂದು ನಿರೀಕ್ಷಿಸಲಾಗಿದೆ. ಈ ವೀಡಿಯೊಗಳು ಪಠ್ಯದಲ್ಲಿ ನೀಡಲಾಗಿರುವ ಮಾಹಿತಿಗಳಿಗೆ ಪೂರಕವಾಗಿದ್ದು ನಿಮಗೆ ನೆರವಾಗುತ್ತವೆಯಾದರೂ, ಅವುಗಳ ನೆರವು ದೊರಕದೇ ಹೋದರೂ ಸಮಸ್ಯೆ ಯಾಗದಂತೆ ಅವಶ್ಯಕ ಮಾಹಿತಿಯನ್ನು ಪಠ್ಯದಲ್ಲಿ ಸೇರಿಸಲಾಗಿದೆ.

ಟೆಸ್ ಇಂಡಿಯಾ ವೀಡಿಯೋ ಸಂಪನ್ಮೂಲಗಳನ್ನು http://www.tess-india.edu.in ಎಂಬ ವೆಬ್‌ಸೈಟ್‌ನಲ್ಲಿ ನೇರವಾಗಿ ನೋಡಬಹುದು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇಲ್ಲವೇ ಮೆಮೋರಿ ಕಾರ್ಡ್ ಅಥವಾ ಸಿಡಿಯ ಮೂಲಕ ಪಡೆಯಬಹುದು.

**ಟೆಸ್-ಇಂಡಿಯಾ (Teacher Education through School based Support) ಯೋಜನೆಯ ಬಗ್ಗೆ**

ವಿದ್ಯಾರ್ಥಿ-ಕೇಂದ್ರಿತ ಹಾಗೂ ವಿದ್ಯಾರ್ಥಿಗಳನ್ನು ಒಳಗೊಂಡ ಕಲಿಕಾ ಪದ್ಧತಿಯನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಮುಕ್ತ ಶೈಕ್ಷಣಿಕ ಸಂಪನ್ಮೂಲಗಳನ್ನು ಒದಗಿಸುವ ಮೂಲಕ ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದ ಶಿಕ್ಷಕರಿಗೆ ಮತ್ತು ಶಾಲಾ ಮುಖ್ಯಸ್ಥರಿಗೆ ನೆರವಾಗುವುದು **ಟೆಸ್-ಇಂಡಿಯಾದ** ಉದ್ದೇಶ. ಭಾಷೆ, ವಿಜ್ಞಾನ ಹಾಗೂ ಗಣಿತ ಕಲಿಕೆಯಲ್ಲಿ ಪಠ್ಯಪುಸ್ತಕಕ್ಕೆ ಪೂರಕವಾಗಿ ಸಿದ್ಧಪಡಿಸಲಾರುವ **105 ಟೆಸ್-ಇಂಡಿಯಾ ಒಇಆರ್(OER)ಗಳು** ಈ ನಿಟ್ಟಿನಲ್ಲಿ ಶಿಕ್ಷಕರಿಗೆ ನೆರವಾಗಲಿವೆ. ತಮ್ಮ ವಿದ್ಯಾರ್ಥಿಗಳಿಗೆ ತರಗತಿಯಲ್ಲಿ ಮಾಡಿ ತೋರಿಸಬಹುದಾದ ಚಟುವಟಿಕೆಗಳನ್ನು ಒದಗಿಸುವುದರ ಜೊತೆಗೆ, ಬೇರೆ ಬೇರೆ ಶಾಲೆಗಳಲ್ಲಿ ಶಿಕ್ಷಕರು ಹೇಗೆ ಈ ವಿಧಾನವನ್ನು ಅನುಸರಿಸುತ್ತಿದ್ದಾರೆ ಎಂಬ ವಸ್ತುಸ್ಥಿತಿ ಅಧ್ಯಯನಗಳನ್ನೂ ಇವು ಒಳಗೊಂಡಿವೆ. ಅಲ್ಲದೆ, ತಮ್ಮ ವಿಷಯ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಹಾಗೂ ಪಾಠಯೋಜನೆಗಳನ್ನು ರಚಿಸಲು ಶಿಕ್ಷಕರಿಗೆ ನೆರವಾಗುವ ಸಂಪನ್ಮೂಲಗಳ ಮಾಹಿತಿ ಕೊಂಡಿ (link)ಗಳನ್ನು ಒಳಗೊಂಡಿದೆ.

ನಮ್ಮ ದೇಶದ ಪಠ್ಯಕ್ರಮವನ್ನು ಅನುಸರಿಸಿ, ಭಾರತೀಯ ಹಾಗೂ ಅಂತರರಾಷ್ಟ್ರೀಯ ಲೇಖಕರಿಂದ ಸಂಯುಕ್ತವಾಗಿ ಸಿದ್ಧಪಡಿಸಲಾಗಿರುವ ಈ ಸಂಪನ್ಮೂಲಗಳು **http://tess-indiaedu.in** ವೆಬ್‌ಸೈಟಿನಲ್ಲಿ ಅಧ್ಯಯನ ಮಾಡಲು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಲು ಮುಕ್ತವಾಗಿ ದೊರಕುತ್ತವೆ. ಭಾರತದ ವಿವಿಧ ರಾಜ್ಯಗಳ ಬಳಕೆದಾರರಿಗೆ ಅನುಕೂಲವಾಗುವಂತೆ ಸಂಪನ್ಮೂಲ ವಿವಿಧ ವರ್ಷನ್‌ಗಳನ್ನು ಹೊಂದಿದೆ. ಸ್ಥಳೀಯ ಮಾಹಿತಿ ಹಾಗೂ ಅವಶ್ಯಕತೆಗಳಿಗೆ ಅನುಗುಣವಾಗಿ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳುವಂತೆ ಶಿಕ್ಷಕರನ್ನು ಕೋರಲಾಗಿದೆ. ಯುಕೆ ಸರ್ಕಾರದ ಅನುದಾನದಲ್ಲಿ, ಯುಕೆಯ ಮುಕ್ತವಿಶ್ವವಿದ್ಯಾಲಯದಲ್ಲಿ **ಟೆಸ್-ಇಂಡಿಯಾ** ರೂಪುಗೊಂಡಿದೆ.

*Version 2.0 SL16v1*
*Karnataka*

*Except for third party materials and othe errw wise stated, this content is made available unde err a Creative Commons Attribution-ShareAlike licence: http://creaat tivecommons.org/licenses/by-sa/3.0/*

*TESS-India is led by The Open University UK and funded by UK aid from the UK government*

# ಈ ಘಟಕದಲ್ಲೇನಿದೆ?

ಶಾಲಾ ನಾಯಕನಾಗಿ ಎಲ್ಲಾ ವಿದ್ಯಾರ್ಥಿಗಳಿಗೆ ಕಲಿಕಾ ಅವಕಾಶ ಮತ್ತು ಪ್ರೋತ್ಸಾಹಯಿರುವುದನ್ನು ದೃಢಪಡಿಸಿಕೊಳ್ಳುವುದು ನಾಯಕನ ಜವಾಬ್ದಾರಿಯಾಗಿದೆ. ಸಂಪನ್ಮೂಲಗಳ ಪರಿಣಾಮಕಾರಿ ನಿರ್ವಹಣೆ ಮತ್ತು ಸ್ಪಷ್ಟ ಅಭಿವ್ಯಕ್ತಿಯಿಂದ ಮಾತ್ರ ಕಲಿಕೆಯನ್ನು ಉತ್ತಮಪಡಿಸಲು ಸಾಧ್ಯ. ಶಾಲಾ ನಾಯಕನ ಪ್ರಮುಖ ನಿರ್ವಹಣೆ ಎಂದರೆ ಮಾನವ ಸಂಪನ್ಮೂಲಗಳ ನಿರ್ವಹಣೆಯಾಗಿದೆ. ಶಾಲಾ ನಾಯಕ ಕೌಶಲಗಳು ಮತ್ತು ಜ್ಞಾನವನ್ನು ಉತ್ತಮಪಡಿಸಲು ಶಿಕ್ಷಕರು, ಸಿಬ್ಬಂದಿ, ವಿದ್ಯಾರ್ಥಿಗಳು, ಪೋಷಕರು ಮತ್ತು ಸಮುದಾಯದ ಸದಸ್ಯರ ಕೊಡುಗೆಗಳನ್ನು ಪಡೆದುಕೊಳ್ಳುವುದು. ಇದರೊಂದಿಗೆ ಮಕ್ಕಳ ಕಲಿಕೆಯನ್ನು ಉತ್ತಮಪಡಿಸಲು ಮಾನವ ಸಂಪನ್ಮೂಲದ ಜೊತೆಗೆ ಹಣಕಾಸು, ಭಾತಿಕ ಸಂಪನ್ಮೂಲಗಳ ನಿರ್ವಹಣೆಯ ಕಲಿಕೆಗೆ ಪೂರಕವಾದ, ಎಟಕಬಹುದಾದ ಮತ್ತು ಪರಿಣಾಮಕಾರಿಯಾಗಿ ಉಪಯೋಗವಾಗುವುದನ್ನು ದೃಢಪಡಿಸಿಕೊಳ್ಳುವುದು ನಾಯಕನ ಜವಬ್ದಾರಿಯಾಗಿದೆ.

ಭಾರತಿಯ ಶಾಲೆಗಳು ಭೌಗೋಳಿಕವಾಗಿ ವೈವಿಧ್ಯಮಯ ಸನ್ನಿವೇಶಗಳು ಪರಿಸರ, ಹವಾಗುಣ, ಸಂಸ್ಕೃತಿಗಳು ಮತ್ತು ಭಾಷೆಗಳಿಂದ ಕೂಡಿದ ವಿದ್ಯಾರ್ಥಿಗಳನ್ನು ಒಳಗೊಂಡಿವೆ. ಗ್ರಾಮೀಣ ಪ್ರದೇಶದ ಬಹುವರ್ಗ ಬೋಧನೆಯ ಏಕೋಪಾಧ್ಯಾಯ (ಅತೀ ಚಿಕ್ಕ ) ಶಾಲೆಯಾಗಿರಲಿ ಅಥವಾ ಹೆಚ್ಚು ವಿದ್ಯಾರ್ಥಿಗಳಿರುವ ದೊಡ್ಡ ನಗರ ಪ್ರದೇಶದ ಹೆಚ್ಚು ಸಿಬ್ಬಂದಿಯಿರುವ ಶಾಲೆಯಾಗಿರಲಿ, ಮಕ್ಕಳ ಕಲಿಕೆಯ ಅಗತ್ಯತೆಗನುಗುಣವಾಗಿ ವೈವಿಧ್ಯಮಯವಾದ ಬಾಹ್ಯ ಸಂಪನ್ಮೂಲಗಳು ಮತ್ತು ಶಾಲಾಧಾರಿತ ಸಂಪನ್ಮೂಲಗಳು ಸಮಾನವಾಗಿರಬೇಕು.



**Figure 1** The challenge of equal access to educational resources.

ಆನೇಕ ಶಾಲೆಗಳಲ್ಲಿ ಕಲಿಕೆಯನ್ನು ಉತ್ತಮಗೊಳಿಸಲು ಭಾತಿಕ ಸಂಪನ್ಮೂಲಗಳು ಮಿತವಾಗಿದ್ದಾಗ್ಯೂ ಕಲಿಕಾ ಸಂಪನ್ಮೂಲಗಳ ಲಭ್ಯತೆ ನಾಯಕ ದೃಢಚಿತ್ತತೆಯ ಬದಲಾವಣೆಯಿಂದ ಶಾಲೆಯಲ್ಲಿರುವ ಎಲ್ಲಾ ಸಂಪನ್ಮೂಲಗಳೊಂದಿಗೆ ಜನ, ಪರಿಸರ, ಅದೂ ಅಲ್ಲದೆ ಸಮುದಾಯದ ಸಹಭಾಗಿತ್ವದಿಂದ ಸಾಧ್ಯವಾಗುತ್ತದೆ.

ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಬೋಧನೆ, ಕಲಿಕಾ ಅನುಭವಗಳು ಸಂಪದೀಕರಣಕ್ಕೆ ಶಾಲಾ ನಾಯಕರು ಮತ್ತು ಶಿಕ್ಷಕರು ಶೈಕ್ಷಣಿಕ ಸಂಪನ್ಮೂಲಗಳನ್ನು ಯಥೇಚವಾಗಿ ಬಳಸುವುದು ಅತ್ಯಗತ್ಯವಾಗಿದೆ.

ಈ ಘಟಕವು ನಿಮ್ಮ ದೃಷ್ಠಿಕೋನವು ಶೈಕ್ಷಣಿಕ ಸಂಪನ್ಮೂಲಗಳ ಗರಿಷ್ಠ ಬಳಕೆ ಮತ್ತು ಅವುಗಳ ಅನ್ವೇಷಣೆ ಎಷ್ಟರ ಮೆಟ್ಟಿಗೆ ಬಳಸಿಕೊಳ್ಳಬಹುದು ದೃಢಪಡಿಸಿಕೊಳ್ಳಲು ಸಹಾಯ ಮಾಡುತ್ತದೆ.

## ಕಲಿಕಾ ದಿನಚರಿ

ಈ ಘಟಕವನ್ನು ಮಾಡುವ ಅವಧಿಯಲ್ಲಿ ನಿಮ್ಮ ಯೋಜನೆ ಮತ್ತು ಚಿಂತನಾ ವಿಷಯವನ್ನು ನಿಮ್ಮ ಕಲಿಕಾ ದಿನಚರಿಯಲ್ಲಿ ಒಂದು ಪುಸ್ತಕದಲ್ಲಿ ಅಥವಾ ಒಂದು ಫೋಲ್ಡರ್‌ನಲ್ಲಿ ಸಂಗ್ರಹಿಸಿಡಿ ( ಪ್ರಾಯಶಃ ನೀವು ಈಗಾಗಲೇ ಪ್ರಾರಂಭಿಸಿದಲ್ಲಿ ) ( ಪ್ರಾರಂಭಿಕ ಹಂತದಲ್ಲಿ )

ನೀವು ಒಬ್ಬರೇ ಈ ಘಟಕದಲ್ಲಿ ಕೆಲಸ ಮಾಡುತ್ತಿದ್ದರೆ. ಅದರೆ ನಿಮ್ಮ ಕಲಿಕೆಯನ್ನು ಬೇರೆ ಶಾಲಾ ನಾಯಕರೊಂದಿಗೆ ಚರ್ಚಿಸಲು ಸಾಧ್ಯವಾದರೆ ನೀವು ಹೆಚ್ಚು ಕಲಿಯಬಹುದು. ಇವರು ನೀವು ಈಗಾಗಲೇ ಸಹಯೋಗ ಪಡೆದಿರುವ ಸಹೋದ್ಯೋಗಿ ಇರಬಹುದು. ಅಥವಾ ನೀವು ಬೆಳೆಸಿರುವ ಹೊಸ ಸಂಬಂದದವರಾಗಿರಬಹುದು. ( ಹೊಸಬರಾಗಿರಬಹುದು ) ಇದು ಔಪಚಾರಿಕ ( ಸಂಘಟಿತ ಮಾರ್ಗ ) ಅಥವಾ ಅನೌಪಚಾರಿಕವಾಗಿರಬಹುದು. ನಿಮ್ಮ ದೀರ್ಘಕಾಲದ ಕಲಿಕೆ ಮತ್ತು ಅಭಿವೃದ್ದಿಯ ನಕ್ಷೆಗಳನ್ನು ತಯಾರಿಸುವಾಗ ನಿಮ್ಮ ಕಲಿಕಾ ದಿನಚರಿಯಲ್ಲಿ ಮಾಡಿಕೊಂಡಿರುವ ಟಿಪ್ಪಣಿಗಳು ಈ ರೀತಿಯ ಸಭೆಗಳಲ್ಲಿ ಉಪಯುಕ್ತವಾಗುತ್ತದೆ.

# ಈ ಘಟಕದಲ್ಲಿ ಶಾಲಾ ನಾಯಕರು ಏನನ್ನು ಕಲಿಯಬಹುದು?




- ಶಾಲೆಯ ಒಳಗೆ ಮತ್ತು ಹೊರಗೆ ಲಭ್ಯವಿರುವ ವ್ಯಾಪಕ ಸಂಪನ್ಮೂಲಗಳನ್ನು ಅರ್ಥೈಸಿಕೊಳ್ಳಲು
- ನಿಮ್ಮ ಶಾಲೆಯಲ್ಲಿರುವ ಸಮರ್ಪಕವಾದ ವಿವಧ ಸಂಪನ್ಮೂಲಗಳನ್ನು ಗುರುತಿಸಲು.
- ಸಂಪನ್ಮೂಲಗಳು ಕಲಿಕೆಗೆ ಸೂಕ್ತವಾಗಿ ಮತ್ತು ಪರಿಣಾಮಕಾರಿಯಾಗಿ ಬಳಕೆಯಾಗುತ್ತಿರುವುದುನ್ನು ಖಾತರಿಪಡಿಸಿಕೊಳ್ಳಲು ಸಿಬ್ಬಂದಿಯನ್ನು ತೊಡಗಿಸಿಕೊಳ್ಳಲು.
- ನಿಮ್ಮ ಶಾಲೆಯಲ್ಲಿ ಸಂಪನ್ಮೂಲಗಳು ಪರಿಣಾಮಕಾರಿ ಬಳಕೆಗೆ ಒಂದು ಯೋಜನೆಯನ್ನು ಸಿದ್ಧಪಡಿಸಲು.

# ಶಾಲೆಯ ಒಳಗೆ ಮತ್ತು ಹೊರಗೆ ಇರುವ ಸಂಪನ್ಮೂಲಗಳ ವಿಧಗಳು

ಚರ್ಚೆ ಭೇದನ, ವೀಕ್ಷಣೆ, ಹೋಲಿಕೆ ಅಥವಾ ಪ್ರಯೋಗ ಮುಂತಾದವುಗಳಲ್ಲಿ ಯಾವುದನ್ನಾದರೂ ( ಏನನ್ನಾದರೂ ) ಒಂದು ಶೈಕ್ಷಣಿಕ ಸಂಪನ್ಮೂಲವಾಗಿ ಬದಲಾಯಿಸಿ ( ಪರಿವರ್ತಿಸಿ ) ಒಂದು ಕಲಿಕಾವಾಹಕ ( ವಾಹನ ) ವಾಗುತ್ತದೆ. ಆದಾಗ್ಯೂ ಸಂಪನ್ಮೂಲಗಳ ಲಭ್ಯತೆಗೆ ಒಂದು ಆರ್ಥಿಕ ಆಯಾಮವಿರುತ್ತದೆ. ಕೆಲವು ಸಂಪನ್ಮೂಲಗಳಿಗೆ ಹಣಕಾಸಿನ ಅಗತ್ಯವಿದ್ದು, ಅದರ ಸಂಗ್ರಹಣೆಯ ಮೂಲವನ್ನು ಕಂಡುಹಿಡಿಯಬೇಕಾಗಬಹುದು ಅದರೆ ಕೆಲವು ಸಂಪನ್ಮೂಲಗಳು ಮುಕ್ತವಾಗಿ ಲಭ್ಯವಿದ್ದು, ಅವುಗಳನ್ನು ಗುರುತಿಸಬೇಕಾಗುತ್ತದೆ.

ಟೇಬಲ್ 1, ಒಂದು ಶಾಲೆಯ ಉತ್ಕೃಷ್ಟ ಕಲಿಕಾ ಪರಿಸರವನ್ನು ಸೃಷ್ಟಿಸಲು ಉಪಯೋಗಿಸಬಹುದಾದ ವಿವಿಧ ಸಂಪನ್ಮೂಲಗಳ ವರ್ಗಗಳನ್ನು ನೀಡುತ್ತದೆ. ನೀವು ಈ ಮೊದಲು ಅವುಗಳನ್ನು ಪಂಪನ್ಮೂಲಗಳೆಂದು ಪರಿಗಣಿಸದೇ ಇರಬಹುದು. ಈ ಕೆಳಗಿನ ಚಟುವಟಿಕೆಯು ನಿಮ್ಮ ಶಾಲೆಯಲ್ಲಿ ಯಾವ ಸಂಪನ್ಮೂಲಗಳು ಲಭ್ಯವಿದೆ ಎಂಬುವುದನ್ನು ಪರಿಶೀಲಿಸಲು ಸಹಾಯ ಮಾಡುತ್ತದೆ. ( ಸಹಕಾರಿಯಾಗಿದೆ )

**ಟೇಬಲ್ 1 ಸಂಪನ್ಮೂಲಗಳ ವರ್ಗಗಳು**

| | |
|---|---|
|  | ವರ್ಗ 1 ಜನರು :– ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು, ಬೋಧಕೇತರ ಸಿಬ್ಬಂದಿ, ಹಳೆಯ ವಿದ್ಯಾಥಿಗಳು, ಬೇರೆ ಶಾಲೆಗಳ ಸಿಬ್ಬಂದಿ, ನೆರೆಹೊರೆ ಪ್ರಾಯೋಜಕರು, ಫಲಾನುಭವಿಗಳು, ಸಮುದಾಯದ ತಜ್ಞರು ಇತ್ಯಾದಿ. |
|  | ವರ್ಗ2 ಸಜೀವ ವಸ್ತುಗಳು :– ಸಾಕುಪ್ರಾಣಿಗಳು ಮತ್ತು ಕಾಡು ಪ್ರಾಣಿಗಳು, ಪಕ್ಷಿಗಳು, ಕೀಟಗಳು, ಸರೀಸೃಪಗಳು, ಅವುಗಳ ಆವಾಸಸ್ಥಾನಗಳು ( ಹಿಂಡು, ಮಂದೆ ಇತ್ಯಾದಿ ) ಮರಗಳು, ಹೂವುಗಳು, ಬೆಳೆಗಳು, ಹಣ್ಣುಗಳು, ತರಕಾರಿಗಳು ಮುಂತಾದವು. |
|  | ವರ್ಗ 3 ಶಾಲಾ ಪರಿಸರ : ಒಳಾಂಗಣ, ತರಗತಿ ಕೋಣೆ, ಸ್ನಾನಗೃಹ, ಅಡುಗೆ ಕೋಣೆ, ಕಚೇರಿಗಳು, ಆವರಣಗಳು ಮತ್ತು ಪ್ರಯೋಗಾಲಯಗಳು ಹೊರಾಂಗಣ, ಶಾಖದ ಮೂಲಗಳು, ಶಬ್ದ, ಬೆಳಕು ಮುಂತಾದವು. |
|  | ವರ್ಗ 4 ಶಾಲಾ ಪರಿಕರ : ಡೆಸ್ಕು ( ಮೇಜು ) ಕುರ್ಚಿ, ಕಪ್ಪು ಹಲಗೆ ಮುಂತಾದವು. |
|  | ವರ್ಗ 5– ಸ್ಥಳೀಯ ಪರಸರ :– ನಗರ, ಗ್ರಾಮೀಣ, ಕರಾವಳಿ, ಬೆಟ್ಟ ಪ್ರದೇಶಗಳು, ಹವಾಮಾನ, ನದಿ, ಕೈಗಾರಿಕೆ, ಕೃಷಿಯೋಗ್ಯ ಪ್ರದೇಶ ಮುಂತಾದವು. |
|  | ವರ್ಗ 6 – ವಸ್ತುಗಳು :– ಪುಸ್ತಕಗಳು, ಲೇಖನ ಸಾಮಗ್ರಿಗಳು, ಭಿತ್ತಿ ಚಿತ್ರಗಳು, ನಕ್ಷೆಗಳು, ಆಟಗಳು, ಗಣಿತ ಕಿಟ್, ಪ್ರಯೋಗಾಲಯದ ಪರಿಕರಗಳು, ಗಣಕಯಂತ್ರಗಳು, ಮೊಬೈಲ್ ಪೋನ್‌ಗಳು, ಕರಕುಷಲ ವಸ್ತುಗಳು, ಸಾಧನಗಳು, ಉಪಗ್ರಹಾಧಾರಿತ ದೂರದರ್ಶನ, ವಿಷಯ ಸಂಬಂಧಿ ಸಂಪನ್ಮೂಲಗಳು ಇತರ ವಸ್ತುಗಳು ಮುಂತಾದವು. |




ಶಿಕ್ಷಣ ಹಕ್ಕು ಕಾಯ್ದೆ 2009 ಅನ್ನು ಆಧಾರಿಸಿ ನಿಮ್ಮ ಶಾಲೆಗಳಲ್ಲಿ ಲಭ್ಯವಿರುವ ಸಂಪನ್ಮೂಲಗಳ ಆಧಾರದ ಮೇಲೆ ಈ ಕೆಳಗಿನ ಅಂಶಗಳನ್ನು ನೋಡಬೇಕಾದುದು ಮುಖ್ಯವಾಗಿದೆ. ಇದರಲ್ಲಿ " ದಿ ಶೆಡ್ಯೂಲ್ ನಾರ್ಮ್ಸ್ ಅಂಡ್ ಸ್ಟ್ಯಾಂಡರ್ಡ್ ಫಾರ್ ಎ ಸ್ಕೂಲ್ ( ಒಂದು ಶಾಲಾ ಗುಣಮಟ್ಟ ಮತ್ತು ವೇಳಾಪಟ್ಟಿ ) ಇದು ಶಿಕ್ಷಕರು, ಕಟ್ಟಡಗಳು, ಶೈಕ್ಷಣಿಕ ವರ್ಷದ ಕಲಿಷ್ಟ ಕೆಲಸದ ದಿನಗಳು, ಅಥವಾ ಸೂಚನಾ ಗಂಟೆಗಳು, ಶಿಕ್ಷಕರ ವಾರದ ಕನಿಷ್ಟ ಕೆಲಸದ ಗಂಟೆಗಳ ಸಂಖ್ಯೆ ಕಲಿಕಾ – ಬೋಧನಾ ಉಪಕರಣಗಳು, ಗ್ರಂಥಾಲಯ, ಕ್ರೀಡಾ ಸಾಮಗ್ರಿಗಳು, ಆಟಗಳು ಮತ್ತು ಉಪಕರಣಗಳು.

ಚಟುವಟಿಕೆ 1: ಯಾವ ಸಂಪನ್ಮೂಲಗಳು ಲಭ್ಯವಿದೆ

ಪಠ್ಯ ಕ್ರಮದಲ್ಲಿ ನಿಮಗೆ ಪರಿಚಯವಿರುವ (ಉದಾ– ನೀವು ಬೋಧಿಸಿರುವ ವಿಷಯ) ವಿಷಯದ ಒಂದು ಕ್ಷೇತ್ರ ಅಥವಾ ನಿರ್ದಿಷ್ಟ ಭಾಗವನ್ನು ಆರಿಸಿಕೊಳ್ಳಿ. ನೀವು ಇದನ್ನು ಸ್ವತಃ ಬೋಧಿಸಿ ಅಥವಾ ನಿಮ್ಮ ಸಿಬ್ಬಂದಿಯ ಬೋಧನೆಯನ್ನು ವೀಕ್ಷಿಸಿ ತಿಳಿದಿರಬಹುದು, ತಾತ್ವಿಕವಾಗಿ ಸಿಬ್ಬಂದಿಯ ಒಬ್ಬ ಸದಸ್ಯ ಅಥವಾ ವಿಷಯವನ್ನು ಬೋಧಿಸುವ ಸಿಬ್ಬಂದಿಯ ಗುಂಪಿನೊಂದಿಗೆ ಸಂಪನ್ಮೂಲದ ಸಮಸ್ಯೆಗಳಿಗೆ ಹೆಚ್ಚುವರಿ ಒಳನೋಟ ನೀಡಲು ಕೆಲಸಮಾಡಿ. ಚಟುವಟಿಕೆಗಳನ್ನು ಪೂರೈಸಲು ಈ ಸಿಬ್ಬಂದಿ ನಿಮ್ಮೊಂದಿಗೆ ಒಂದು ಕಾರ್ಯ ನಿರತ ಗುಂಪನ್ನು ರಚಿಸಬಹುದು. ಮತ್ತು ನೀವು ಆ ಘಟಕದ ಹಲವಾರು ಅಂಶಗಳ ಲೆಕ್ಕಾಚಾರವನ್ನು ಹಿಂದಿರುಗಿಸಬಹುದು.

ಟೇಬಲ್ 1 ) ರಲ್ಲಿರುವ ವರ್ಗಗಳನ್ನು ಉಪಯೋಗಿಸಿಕೊಂಡು ಪ್ರಸ್ತುತ ಲಭ್ಯವಿರುವ ಮತ್ತು ಕಲಿಕೆಗೆ ಬೆಂಬಲ ನೀಡಲು ಉಪಯೋಗಿಸಬಹುದಾದ ಸಂಪನ್ಮೂಲಗಳನ್ನು ಗುರುತಿಸಿ ಕೆಳಗಿನ ಉದಾಹರಣೆಯಂತೆ ಶಾಲೆಯ ಒಳಗೆ ಮತ್ತು ಶಾಲೆಯಿಂದಾಚೆ ಇರುವ ಸಂಪನ್ಮೂಲ ವರ್ಗಗಳನ್ನು ಗುರುತಿಸಿ. ಟೇಬಲ್ 2 ನಿಮಗೆ ದೊರಕಬಹುದಾದ (ಸಿಗಬಲ್ಲ) ವಿವಿಧ ವರ್ಗಗಳ ಸಂಪನ್ಮೂಲಗಳ ಉದಾಹರಣೆಗಳನ್ನು ತೋರಿಸುತ್ತದೆ. ( ವರ್ಗ ಸಂಖ್ಯೆಯನ್ನು ನೀಡಲಾಗಿದೆ. ) ಪ್ರತೀ ಸಂಪನ್ಮೂಲವು ಶಾಲೆಯಿಂದ ಒಳಗಿದಯೇ ಅಥವಾ ಹೊರಗಿದೆಯೇ ಎಂದು ಗುರುತಿಸಿ. ನೀವು ಉಪಯೋಗಿಸಬೇಕಾದ ಸಾಧ್ಯತೆಯ ಬಗ್ಗೆ ಯೋಚಿಸಿ

ಟೇಬಲ್ 2 : ಶಾಲೆಯ ಒಳಗೆ ಹಾಗೂ ಹೊರಗೆ ಸಿಗಬಹುದಾದ ಸಂಪನ್ಮೂಲಗಳನ್ನು ಗುರುತಿಸುವ ಉದಾಹರಣೆಗಳು

| ಸಂಪನ್ಮೂಲಗಳು | | ಶಾಲೆಯ ಕಟ್ಟಡದ ಒಳಗೆ ಮತ್ತು ಆಟಾದ ಮೈದಾನದಲ್ಲಿ ದೊರೆಯಬಲ್ಲವು | ಶಾಲೆಯ ಹೊರಗೆ ದೊರೆಯಬಲ್ಲವು |
|---|---|---|---|
|  | ವರ್ಗ 1 ಜನರು : ಹತ್ತಿರದ ಅಂಗಡಿಯ ಮಾಲೀಕರು | | ✓ |
|  | ವರ್ಗ 2 ಸಜೀವ ವಸ್ತುಗಳ : ತರಕಾತರಿ ಮಡಿ ಮತ್ತು ಮಾವಿನ ಮರ | ✓ | |
|  | ವರ್ಗ 3 ಶಾಲಾ ಪರಿಸರ ಮತ್ತು ಆಟಾದ ಮೈದಾನ | ✓ | |
|  | ವರ್ಗ 4 ಶಾಲಾ ಪರಿಸರ ಪ್ರತಿ ತರಗತಿಯ ಕಪ್ಪು ಹಲಗೆಗಳು | ✓ | |
|  | ವರ್ಗ 5 ಸ್ಥಳೀಯ ಪರಿಸರ : ನದಿ | | ✓ |
|  | ವರ್ಗ 6 ವಸ್ತುಗಳು : ಇಂಟರ್‌ನೇಟ್ ಕೆಫೆ | | ✓ |

ಈಗ ನೀವು ಈ ವಿಷಯಕ್ಕೆ ಇಲ್ಲಿಯವರೆಗೆ ಉಪಯೋಗಿಸದೇ ಇರುವ ಸಂನ್ಮೂಲಗಳನ್ನು ಉಪಯೋಗಿಸಬಹುದಾದ ಸಾಧ್ಯತೆಯ ಬಗ್ಗೆ(ಕುರಿತು) ಯೋಚಿಸಿ. ಈ ಕ್ಷೇತ್ರದಲ್ಲಿ ಕಲಿಕೆಯನ್ನು ಬೆಂಬಲಿಸಲು ವಸ್ತುಗಳಂತೆ ಮಾನವ ಸಂಪನ್ಮೂಲಗಳನ್ನೂ ಪರಿಗಣಿಸಬಹುದು ಎಂಬುದರ ಕುರಿತು ಎಚ್ಚರಿಕೆಯಿಂದ ಯೋಚಿಸಿ. (ಅಂದರೆ ಯಾವುದೇ ಸಿಬ್ಬಂದಿ, ವಿದ್ಯಾರ್ಥಿಗಳು ಅಥವಾ ಪೋಷಕರು ಪರಿಣಾಮಕಾರಿ ಕಲಿಕೆಗೆ ಕೊಡುಗೆ (ಕಾಣಿಕೆ) ನೀಡಬಹುದು ಎಂದು ಪರಿಗಣಿಸಬಹುದು).

ನಿಮ್ಮ ಟೇಬಲ್(ಪಟ್ಟಿ)ಯನ್ನು ಪೂರೈಸಿದ ನಂತರ ಪ್ರತಿ ಸಂಪನ್ಮೂಲಗಳನ್ನು ಮತ್ತೊಮ್ಮೆ ಗಮನಿಸಿ. ಮತ್ತು ಎರಡು ಸಂಪನ್ಮೂಲಗಳು ಪ್ರಾಯಶಃ ನಿಮ್ಮ ಎಲ್ಲಾ ವಿದ್ಯಾರ್ಥಿಗಳಿಗೆ ಸಮನಾಗಿ ದೊರಕುವುದಿಲ್ಲ ಎಂಬುದನ್ನು ಗುರುತಿಸಿ. ಇದನ್ನು ನೆನಪಿಸಿಕೊಳ್ಳಲು ಸಂಪನ್ಮೂಲಗಳ ಮುಂದೆ ನಕ್ಷತ್ರ ಗುರುತನ್ನು ಹಾಕಿ. (ನಮೂದಿಸಿ). ಉದಾ;– ಗೋಡೆಯ ಮೇಲಿರುವ ಕಪ್ಪು ಹಲಗೆಗಳು ತುಂಬಾ ಎತ್ತರದಲ್ಲಿದ್ದು, ಗಿಡ್ಡ ಹುಡುಗರಿಗೆ ಬರೆಯಲು ನಿಲುಕದೇ ಇರುವುದು ಅಥವಾ ನದಿ ದಡದಲ್ಲಿ ಆಟವಾಡುವ ಹುಡುಗರಿಗೆ ಮಾತ್ರ ಎಟುಕುವುದು ಎಂಬುದನ್ನು ನೀವು ಗಮನಿಸಿರಬಹುದು. ನೀವು ಗಮ,ನಿಸಿದ ಯಾವುದೇ ಅಸಮಾನತೆಯನ್ನು ನಿಮ್ಮ ಕಲಿಕಾ ದಿನಚರಿಯಲ್ಲಿ ನಮೂದಿಸಿ.(ಟಿಪ್ಪಣೆ ಮಾಡಿ.) ಮತ್ತು ಸಂಪನ್ಮೂಲಗಳ ಉಪಯೋಗವನ್ನು ಹೇಗೆ ಗಣನೆಗೆ ತೆಗೆದುಕೊಳ್ಳುವಿರಿ ಎಂಬುದನ್ನು ಯೋಚಿಸಿ.

ಅಂತಿಮವಾಗಿ ನೀವು ಮಾಡಿರುವ ಪಟ್ಟಿಯನ್ನು ಮತ್ತೊಮ್ಮೆ ಗಮನಿಸಿ ಯಾವ ಸಂಪನ್ಮೂಲಗಳು ಉಚಿತ ಎಂಬುದನ್ನು ಸ್ಮೈಲಿ ಚಿಹ್ನೆಯಿಂದ ಗುರುತಿಸಿ. ಯಾವ ಸಂಪನ್ಮೂಲಗಳಿಗೆ ಹಣಕಾಸಿನ ಅಗತ್ಯವಿದೆ ಎಂಬುದನ್ನು ಪರಿಗಣಿಸಿ ರೂಪಾಯಿ ಚಿಹ್ನೆಯಿಂದ ಗುರುತಿಸಿ.

**ಚರ್ಚೆ:**

ನಿಮ್ಮ ಶಾಲೆಯ ಸಂಪನ್ಮೂಲಗಳ ನಿರ್ವಹಣೆಯು ಆಂತರಿಕ ಕಲಿಕೆಯ ಪ್ರಥಮ ಹಂತ (ಹೆಜ್ಜೆ)ವಾಗಿದ್ದು, ಪ್ರಸ್ತುತ ಉಪಯೋಗಿಸುತ್ತಿರುವ ಸಂಪನ್ಮೂಲಗಳನ್ನು ಅಥವಾ

ಲಭ್ಯವಿರುವ ಸಂಪನ್ಮೂಲಗಳನ್ನು ಗುರುತಿಸಿ ಇದು ಪರಿಣಾಮಕಾರಿಯಾಗಿ ಉತ್ತೇಜಿಸುತ್ತಿದೆಯೇ ಎಂಬುದನ್ನು ಯೋಚಿಸಿ.

ಕೆಲವು ಸಂಪನ್ಮೂಲಗಳು ಇತರೆ ಸಂಪನ್ಮೂಲಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ಬಳಕೆಯಾಗುತ್ತಿರುವುದನ್ನು ಪ್ರಾಯಶಃ ನೀವು ಗುರುತಿಸಿರಬಹುದು. ಮತ್ತು ಕೆಲವೊಂದನ್ನು ಸಂಪನ್ಮೂಲಗಳೆಂದು ಯೋಚಿಸದೇ ಇರುವುದನ್ನು ಕಂಡುಕೊಂಡಿರಬಹುದು. ನೀವು ಈ ಉಪಯುಕ್ತ ಪಟ್ಟಿಯನ್ನು ಈ ಮಾಡ್ಯುಲ್‌ನ(ಸಾಹಿತ್ಯದ) ಉದ್ದಕ್ಕೂ ಉಪಯೋಗಿಸುತ್ತಿರಬಹುದು ಮತ್ತು ನಿಮ್ಮ ನಿರ್ದಿಷ್ಟ ಸಿಬ್ಬಂದಿಯವರು ಸಂಪನ್ಮೂಲಗಳನ್ನು ಬಳಸುತ್ತಿದ್ದಾರೆಂಬುದನ್ನು ಅರ್ಥೈಸಿಕೊಳ್ಳಲು ಸಹಾಯಕವೆಂದು ಕಂಡುಕೊಳ್ಳುವಿರಿ.

ಸಂಪನ್ಮೂಲಗಳು ದೊರೆಯುವಲ್ಲಿನ ಸಮಾನತೆಯನ್ನು ನೀವು ಈಗಾಗಲೇ ಗುರುತಿಸಲು ಆರಂಭಿಸಿರಬಹುದು. ಈ ಅಸಮಾನತೆಗೆ ಲಿಂಗ, ಆದಾಯ, ವಾಸ ಸ್ಥಳ, ಗಾತ್ರ, ದೈಹಿಕ ಸಾಮರ್ಥ್ಯ ಅಥವಾ ಇತರ ಅಂಶಗಳು ಕಾರಣವಾಗಿರಬಹುದು. ಎಲ್ಲರಿಗೂ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸುವುದು ಬಹಳ ಮುಖ್ಯ ಅಥವಾ ಅನನುಕೂಲತೆ ಇರುವ ವಿದ್ಯಾರ್ಥಿಗಳಿಗೆ ಪರ್ಯಾಯಗಳನ್ನು ಒದಗಿಸುವುದು. ಉದಾಹರಣೆಗೆ ಒಂದು ತರಗತಿಯಲ್ಲಿ ಹುಡುಗರೇ ಬಹು ಸಂಖ್ಯೆಯಲ್ಲಿ ಕಂಪ್ಯೂಟರ್ ಅನ್ನು ಉಪಯೋಗಿಸಬಹುದು ಆಗ ಶಿಕ್ಷಕರು ಹುಡುಗಿಯರಿಗೂ ಕಂಪ್ಯೂಟರ್ ಅನ್ನು ನೀಡುವ ಮತ್ತು ಸಮಾನತೆಯನ್ನು ಹಂಚಿಕೊಳ್ಳುವ ಜವಬ್ದಾರಿಯನ್ನು ಉತ್ತೇಜಿಸುವ ಮೂಲಕ ತಿಳಿಸಿಕೊಡಬಹುದು.

ಸಂಪನ್ಮೂಲಗಳನ್ನು ಕ್ರೋಢಿಕರಿಸುವುದು ಒಂದು ಸಮಸ್ಯೆಯಾಗಬಹುದು. ಅನೇಕ ಶಾಲೆಗಳಲ್ಲಿ ಸಂಪನ್ಮೂಲಗಳಿಗೆ ಹಣಭ ಹೂಟಲು ನಿಧಿಯ ಕೊರತೆ ಇರಬಹುದು. ಆದ್ದರಿಂದ ಹೂಡಿಗೆ ಇಲ್ಲದ(ಉಚಿತ) ಸಂಪನ್ಮೂಲದ (ಮಾನವ ಮತ್ತು ವಸ್ತು) ಮೇಲೆ ಗಮನ ಹರಿಸುವುದು ಸೂಕ್ತವಾಗುತ್ತದೆ. ಸಂಪನ್ಮೂಲಗಳ ಕೊಡು ಕೊಳ್ಳುವಿಕೆಗೆ ನಿಧಿ ಸಂಗ್ರಹಿಸಲು ಆ ಸಂಪನ್ಮ್ಯೂಉಲಗಳ ಬಳಕೆಯ ಉದ್ದೇಶ ಹಾಗೂ ಪ್ರಭಾವವನ್ನು ಹೂಡಿಗೆದಾರರಿಗೆ ಸ್ಪಷ್ಟಪಡಿಸಿದಲ್ಲಿ ಸುಲಭವಾಗುತ್ತದೆ.

## ಶಾಲಾ ಆಂತರಿಕ ಮತ್ತು ಬಾಹ್ಯ ಸಂಪನ್ಮೂಲಗಳನ್ನು ಗುರುತಿಸುವುದು

ನೀವು ಈಗ ನಿಮ್ಮ ಶಾಲಾ ಸಿಬ್ಬಂದಿ ವರ್ಗದವರಿ ಕಲಿಕೆಯನ್ನು ಬೆಂಬಲಿಸಬಹುದಾದ ಅಸ್ತಿತ್ವದಲ್ಲಿರುವ ಸಂಪನ್ಮೂಲಗಳನ್ನು ಎಷ್ಟರ ಮಟ್ಟಿಗೆ ಗುರುತಿಸುತ್ತಾರೆ ಎಂಬುದನ್ನು ಪರಿಗಣಿಸುವಿರಿ. ನಿಮ್ಮ ಎಲ್ಲಾ ತರಗತಿಗಳಲ್ಲಿ ಕಪ್ಪು ಹಲಗೆಗಳು ಇರಬಹುದು. ಆದರೆ ಅದು ಹೇಗೆ ಮತ್ತು ಎಷ್ಟು ಭಾರಿ ವಿದ್ಯಾರ್ಥಿಗಳ ಕಲಿಕೆಗೆ ಬಳಸಲಾಗುತ್ತಿದೆ. ಪ್ರಾಯಶಃ ಅವುಗಳು ಹೆಚ್ಚು ಬಳಕೆಯಾಗುತ್ತಿರಲಿಕ್ಕಿಲ್ಲ. ಏಕೆಂದರೆ ಅವುಗಳ ಕಪ್ಪು ಬಣ್ಣ ಮಾಸಿ ಹೋಗಿದ್ದು, ತರಗತಿಯ ಹಿಂದೆ ಕುಳಿತಿರುವ ವಿದ್ಯಾರ್ಥಿಗಳಿಗೆ ಬರವಣಿಗೆ ಸ್ಪಷ್ಟವಾಗಿ ಕಾಣುವಂತಿರುವುದಿಲ್ಲ ಅಥವಾ ಅವು ಪ್ರಾತ್ಯಕ್ಷಿಕೆಗಳಾಗಿ ಬಳಸುವ ಬದಲು ಸ್ಥಿರ ಪ್ರದರ್ಶನದ ಸ್ಥಳದಂತಿವೆ. ನೀವು ಈ ತಿರ್ಮಾನವನ್ನು ಮೊದಲು ತೆಗೆದುಕೊಳ್ಳುವ ಮೊದಲು ವಿವಿಧ ಸಂಪನ್ಮೂಲಗಳ ನಿಖರವಾದ ಬಳಕೆಯನ್ನು ನಿಮ್ಮ ಸಿಬ್ಬಂದಿಯ ಸಹ ಬಾಗಿತ್ವದಲ್ಲಿ ಕಾರ್ಯ ನಿರ್ವಹಿಸಬೇಕಾಗುತ್ತದೆ.

### ಚಟುವಟಿಕೆ 2: ಸಂಪನ್ಮೂಲಗಳು ಎಷ್ಟರಮಟ್ಟಿಗೆ ಬಳಕೆಯಾಗುತ್ತಿವೆ?

ಚಟುವಟಿಕೆ ( 1 )ರ ಪ್ರಕಾರ ನೀವು ಗುರುತಿಸಿ ಪಟ್ಟಿಮಾಡಿದ ಸಂಪನ್ಮೂಲಗಳು

ಈ ಕೆಳಗೆ ವರ್ಗೀಕರಿಸಲಾಗಿರುವ ಯಾವುದಾದರು ಒಂದು ಅಂಶ ಕಲಿಕೆಗೆ ಹೇಗೆ ಸಂಪನ್ಮೂಲವಾಗಿ ಬೆಂಬಲಿಸುತ್ತದೆ ಯೋಚಿಸಿ ?

- ಸಕ್ರಿಯ ಕಲಿಕೆಗೆ ಹೆಚ್ಚು ಪರಿಣಾಮಕಾರಿಯಾಗಿ ಬೆಂಬಲಿಸುತ್ತದೆ.
- ಸಕ್ರಿಯ ಕಲಿಕೆಗೆ ಭಾಗಶ: ಬೆಂಬಲಿಸುತ್ತದೆ. ಆದರೆ ಆಗ್ಗಾಗೆ ಬಳಸಲಾಗುವುದಿಲ್ಲ
- ಭಾಗಶ: ಸಕ್ರಿಯ ಕಲಿಕೆಗೆ ಬೆಂಬಲಿಸಿ ಬಳಸಲಾಗುತ್ತಿದೆ. ಯಾವಾಗಲೂ ಪರಿಣಾಮಕಾರಿಯಾಗಿ ಬಳಸಲಾಗುತ್ತಿಲ್ಲ ಅಥವಾ ಸಂಪೂರ್ಣ ಸಂಭಾವ್ಯವಾಗಿ ಅಥವಾ ಕೆಲವೇ ವಿದ್ಯಾರ್ಥಿಗಳಿಗೆ ಬಳಲಾಗುತ್ತಿದೆ.

ಸದಸ್ಯರು , ವಿದ್ಯಾರ್ಥಿಗಳು ಮತ್ತು ಪೋಷಕರು ವಿವಿಧ ಸಂಪನ್ಮೂಲಗಳನ್ನು ಪ್ರಮಾಣೀಕರಿಸುವಾಗ ಅಥವಾ ಮೌಲ್ಯಮಾಪನ ಮಾಡುವುದು. ಇತರರನ್ನು ಸೇರಿಸಿಕೊಳ್ಳುವುದು. ಉಪಯುಕ್ತ ಎಂದು ನೀವು ಕಂಡುಕೊಳ್ಳಬಹುದು.

ವಿವಿಧ ಸಂಪನ್ಮೂಲಗಳನ್ನು ಪ್ರಮಾಣೀಕರಿಸುವಾಗ ಅಥವಾ ಮೌಲ್ಯಕರಿಸುವಾಗ ಇತರರ ತೀರ್ಮಾನಗಳನ್ನು ಸೇರಿಸಿಕೊಳ್ಳಬೇಕಾಗುತ್ತದೆ. ಎಂಬುದನ್ನು ಕಂಡುಕೊಳ್ಳುವಿರಿ ಕಪ್ಪುಹಲಗೆಯ ಉದಾಹರಣೆಯನ್ನು ಬಳಸಿಕೊಂಡು ನೀವು ತರಗತಿ ವೀಕ್ಷಣೆನಡೆಸುವಾಗ ಶಿಕ್ಷಕರು & ವಿದ್ಯಾರ್ಥಿಗಳನ್ನು ಕೇಳಿ ವಿಷಯಗಳ ಅನ್ವೇಷಣೆ ವಿಚಾರ ವಿನಿಮಯ ಮಾಡಲು ಅಥವಾ ವಾದಗಳನ್ನು ಅಬಿವೃದ್ಧಿ ಪಡಿಸಲು ಕಪ್ಪುಹಲಗೆಯು ವಿಷಯಗಳ ಕಲಿಕೆಗೆ ಪರಿಣಾಮಕಾರಿಯಾಗಿ ಹೇಗೆ ಬೆಂಬಲಿಸುತ್ತದೆ ಎಂಬುದನ್ನು ತೀರ್ಮಾನಿಸಬೇಕು.

## 3 ಸಂಪೂರ್ಣ ಸಾಮರ್ಥ್ಯದ ಕಲಿಕೆಗೆ ಸಂಪನ್ಮೂಲಗಳ ಬಳಕೆ

ತದನಂತರ ಬಳಸಿಕೊಂಡಿರುವ ಸಂಪನ್ಮೂಲಗಳನ್ನು ಹೇಗೆ ಉತ್ತಮ ಪಡಿಸಿಕೊಳ್ಳುವುದು. (ಶ್ರೇಣಿ ಬಿ. ಅಥವಾ ಸಿ ) ಮತ್ತು ನಿಮ್ಮ ಶಾಲೆಯ ವಿಷಯಗಳ ಕಲಿಕಾ ಫಲಶೃತಿಯನ್ನು ಉತ್ತಮಪಡಿಸಲು ಈವರೆಗೆ ಗುರುತಿಸಲಾಗದ ಸಂಪನ್ಮೂಲಗಳನ್ನು (ಶ್ರೇಣಿ ಡಿ) ಹೇಗೆ ಪ್ರವೇಶಿಸಬಹುದು ಎಂಬುದನ್ನು ನೋಡುತ್ತೀರಿ ನಿಮ್ಮ ಶಾಲೆಯಲ್ಲಿ ಈ ಸಂಪನ್ಮೂಲಗಳು ಬೋಧನೆ ಮತ್ತು ಕಲಿಕೆಯ ಒಂದು ಸಾಮಾನ್ಯ ಭಾಗವಾಗಿ ಮಾಡಲು ಕೆಲವು ಸೃಜನಾತ್ಮಕ ಯೋಜನೆ ಸಂಘಟನೆಗಳನ್ನು ಮಾಡಬಹುದು. ಏಕೆಂದರೆ ಭಾಗಶ: ಕೆಲವು ಶಿಕ್ಷಕರು ತಮ್ಮ ಪಾಠಗಳಲ್ಲಿ ಅವುಗಳನ್ನು ಅಳವಡಿಸಲು ವಿಶ್ವಾಸವನ್ನು ಹೊಂದಿರುವುದಿಲ್ಲ .

ಸಮಾನವಾಗಿ ಸಂಪನ್ಮೂಲಗಳು ಅವುಗಳ ಪ್ರಸಕ್ತ ರೂಪದಲ್ಲಿ ಬಳಕೆಯಾಗುತ್ತಿಲ್ಲ ಎಂಬುದಕ್ಕೆ ಒಳ್ಳೆಯ ಕ್ಹರಣಗಳಿವೆ. ( ಉದಾ ಅವುಹಳೆಯವು ದುರಸ್ಥೀಕರಣ ಅಗತ್ಯತೆ ಪರ್ಯಾಯ ಸಂಪನ್ಮೂಲವಾಗಿ ವಿದ್ಯಾರ್ಥಿಗಳ ಕಲಿಕೆಗೆ ಬೆಂಬಲಿಸದಿರುವುದು.) ಅದ್ದರಿಂದ ಸಂಪನ್ಮೂಲ ನಿರ್ವಹಣೆಯು ಶಾಲಾ ನಾಯಕನ ಒಂದು ಪ್ರಮುಖ ಜವಾಬ್ದಾರಿಯಾಗಿದೆ ಆದಾಗ್ಯೂ ನಿಮ್ಮ ಕಾರ್ಯಕ್ರಮ ಪಟ್ಟಿ (ಅಜೆಂಡಾ) ಮೇಲೆ ಪ್ರಭಾವ ಬೀರಲು ಅವಕಾಶನೀಡಿದಾಗ ಅದು ಅಘಾದವಾಗಬಹುದು. ನೀವು ಕಲಿಕಾ ಸುಧಾರಣೆಯನ್ನು ಸಕ್ರಿಯಗೊಳಿಸಲು ವಿಶೇಷವಾಗಿ ಸಂಪನ್ಮೂಲ ನಿರ್ವಹಣೆಯಲ್ಲಿ ನಿಮ್ಮ ನೇರ ಒಳಗೊಳ್ಳವಿಕೆ ಕೊಂಡಿಯಾಗಬೇಕು ಉದಾ :- ವಿದ್ಯಾರ್ಥಿನಿಯರು ವಿಜ್ಞಾನ ವಿಷಯದಲ್ಲಿ ಉತ್ತಮ ಶ್ರೇಣಿಯನ್ನು ಸಾಧಿಸದೇ ಇರುವುದನ್ನು ಸಂಪನ್ಮೂಲಗಳ ನಿರ್ವಹಣೆಯಲ್ಲಿ ನೀವು ಆದ್ಯತೀಕರಿಸಬಹುದು.

<u>ಕೇಸ್ ಸ್ಟಡಿ ( ವ್ಯಕ್ತಿ ಅಧ್ಯಯನ ) (1)</u> ರಲ್ಲಿ ವಿವರಿಸಿದಂತೆ ಒಂದು ಉದ್ದೇಶಿತ ರೀತಿಯಲ್ಲಿ ಸಂಪನ್ಮೂಲಗಳನ್ನು ನಿಭಾಯಿಸುವ ಗುರಿ ಹೊಂದಿದೆ

## ವ್ಯಕ್ತಿ ಅಧ್ಯಯನ 1: ಶ್ರೀ ಕುಮಾರ್ ಅವರ ಸಂಪನ್ಮೂಲ ನಿರ್ವಹಣೆ

ಶ್ರೀ ಕುಮಾರ್ ರವರು ಹೆಚ್ಚಾಗಿ ಬಡತನ ಹಿನ್ನಲೆಯನ್ನು ಹೊಂದಿರುವ ವಿದ್ಯಾರ್ಥಿಗಳಿರುವ ಗ್ರಾಮೀಣ ಶಾಲೆಯ ಶಾಲಾ ನಾಯಕರಾಗಿ ಹೊಸದಾಗಿ ನೇಮಕಗೊಂಡರು ತಮ್ಮ ಶಾಲೆಯೂ ಕೂಡ ಕಳಪೆಯಾಗಿದೆ ಎಂದು ತಕ್ಷಣ ತಿಳಿದುಕೊಂಡರು ಅಂದರೆ ಕೆಲಸಗಳ ಪ್ರದರ್ಶನವಿರಲಿಲ್ಲ ವಿದ್ಯಾರ್ಥಿಗಳಿಗೆ ಮೂಲ ಸಾಧನಗಳ ಕೊರತೆ ಯಾವುದೇ ಪೀಠೋಪಕರಣ ಅಥವಾ ಕಪಾಟುಗಳು ಇರಲಿಲ್ಲ ಆದರೆ ನೀರು ಮರಗಳು ಸಸ್ಯವರ್ಗ ವಿದ್ದದೊಡ್ಡ ಶಾಲಾ ಕಾಂಪೌಂಡ್ ಇತ್ತು ತಮ್ಮ ಕೈಯಲ್ಲಿರುವ ಸಂಪನ್ಮೂಲಗಳನ್ನು ಉತ್ತಮ ರೀತಿಯಲ್ಲಿ ಹೇಗೆ ಬಳಸಿಕೊಳ್ಳುತ್ತಾರೆ ಎಂಬುದನ್ನು ಶ್ರೀ ಕುಮಾರ್ ರವರು ನೋಡಿಕೊಳ್ಳುತ್ತಾರೆ. ತಕ್ಷಣದ ಪ್ರದೇಶವನ್ನು ವಿಜ್ಞಾನ ಮತ್ತು ಪರಿಸರ ಅಧ್ಯಯನವನ್ನು ಬೋಧಿಸುವ ಸಂಪನ್ಮೂಲವಾಗಿ ಹೇಗೆ ಉಪಯೋಗಿಸಬಹುದು ಎಂಬ ಆಲೋಚನೆಗಳಿಗೆ ಮುಂದೆಬಂದರು ಆದರೆ ಆ ಪ್ರದೇಶದಲ್ಲಿ ಅದರ ಸಂಭಾವ್ಯಉತ್ತಮಪಡಿಸಲು ಕೆಲವು ಪೋಷಣೆ ಅಗತ್ಯವಿದೆ ಎಂದು ಗುರುತಿಸಿದರು.

ಶ್ರೀ ಕುಮಾರ್ ತಮ್ಮ ಶಿಕ್ಷಕರ ಸಹಾಯದಿಂದ ಶಾಲಾ ಪರಿಸರವನ್ನು ಒಂದು ಸಂಪನ್ಮೂಲವಾಗಿ ನಿರ್ವಹಿಸುವ ಯೋಜನೆಯನ್ನು ಹಾಕಿದರು ( ಮಾಡಿದರು ) ಪ್ರತೀ ವಿದ್ಯಾರ್ಥಿಯು ತಮ್ಮ ಕಲಿಕೆಯ ಭಾಗವಾಗಿ ಶಾಲಾ ಪರಿಸರದಲ್ಲಿ ವಾರದಲ್ಲಿ ಒಂದು ಕ್ರಿಯಾತ್ಮಕವಾಗಿ ಕೆಲಸ ಮಾಡಬೇಕೆಂಬುವುದು ಅವರ ಗುರಿಯಾಗಿತ್ತು. ಇದರ ಗುರಿ ಶಿಕ್ಷಕರು ತಮ್ಮ ಬೋಧನೆಗೆ ಅನುಗುಣವಾಗಿ ಇದನ್ನು ಸಂಘಟಿಸಬೇಕೆಂಬುವುದು ಇದರ ಅರ್ಥ.

ಶ್ರಿ ಕುಮಾರ್‌ರವರು ದೊಡ್ಡ ವಿದ್ಯಾರ್ಥಿಗಳಿಗೆ ಸಸಿಮಡಿಗಳನ್ನು ಮಾಡುವ ಮತ್ತು ನಿರುಣಿಸುವ ಮತ್ತು ಬೆಳೆಗಳನ್ನು ನೆಡುವ ಯೋಜನೆಯನ್ನು ಸೇರಿಸಿದರು. ವಿದ್ಯಾರ್ಥಿಗಳು ಗಣಿತ ತರಗತಿ ರೇಖಾ ಚಿತ್ರದಲ್ಲಿ ಮಾಡಿದ ಕೋಳಿ ಸಾಕಾಣಿಕೆಗಳ ಗುಡನ್ನು ನಿಲ್ಲಿಸಲು ಸಹಾಯ ಮಾಡಲು ಇಬ್ಬರು ಪೋಷಕರ ಹೆಸರನ್ನು ಸೇರಿಸಿದರು. ಒಬ್ಬ ಶಿಕ್ಷಕರು ತಮ್ಮ ಇಂಗ್ಲೀಷ್ ತರಗತಿಯಲ್ಲಿ ಸ್ಥಳಿಯ ವ್ಯಾಪರಿಯೊಂದಿಗೆ ತೋಟಗಾರಿಕಾ ಸಲಕರಣೆಗಳನ್ನು ಉಚಿತವಾಗಿ ನೀಡಲು ಪತ್ರ ಬರೆಯುವ ಕಾರ್ಯವನ್ನು ಒಪ್ಪಿಕೊಂಡರು ವಿದ್ಯಾರ್ಥಿಗಳು ಬಿಜಗಳನ್ನು ಸಂಗ್ರಹಿಸುವ ಮತ್ತು ಸಸಿಗಳನ್ನು ನೆಡುವ ಯೋಜನೆಯನ್ನು ಪ್ರಾರಂಬಿಸಿದರು. ಸ್ಥಳಿಯ ಅರಣ್ಯ ಚಾರಿಟಿ ( ಸಂಘ ) ಯವರು ಕೆಲವು ಗೀಡಗಳನ್ನು ಶಾಲಾ ಕಾಂಪೌಡ್‌ನ ಬದಿಯಲ್ಲಿ ಮುಂದೆ ಬಂದಾಗ ಶ್ರೀ ಕುಮಾರ್ ರವರು ಪುಳಕಿತಗೊಂಡರು. ಹೊಸ "ಹಸಿರು" ಶಾಲಾ ನಾಯಕನ ಹೆಸರು ಎಲ್ಲಾಡೇ ಪಸರಿಸಿತ್ತು. ಮತ್ತು ತಕ್ಷಣ ಪೋಷಕರ ಒಂದು ಗುಂಪು ನಿರಂತರವಾಗಿ ಶಾಲಾ ಪಠಾರವನ್ನಿ ನಿರ್ವಹಣೇ ಮಾಡಲು ಸಹಾಯ ಮಾಡುವುದು ಕಂಡುಬಂದಿತ್ತು.

## ಚಟುವಟಿಕೆ 3: ಪರಿಣಾಮಕಾರಿ ಸಂಪನ್ಮೂಲ ನಿರ್ವಹಣೆಯ ಪ್ರತಿಫಲನ

ಶ್ರೀ ಕುಮಾರ್ ಅವರ ಪ್ರಕರಣವನ್ನು ಪುನಃ ಓದಿ ಮತ್ತು ಕೆಳಗಿನ ಪ್ರಶ್ನೆಗಳಿಗೆ ಬೆಳಕು ಚೆಲ್ಲಿ.

- ಶ್ರೀ ಕುಮಾರ್ ಅವರು ಶಾಲಾ ಪರಿಸರ (Compound ) ವನ್ನು ಕಲಿಕಾ ಸಂಪನ್ಮೂಲವಾಗಿ ಹೇಗೆ ಪರಿಣಾಮಕಾರಿಯಾದರು ?
- ಶ್ರೀ ಕುಮಾರ್ ಶಾಲಾ ಪರಿಸರವನ್ನು ಕಲಿಕಾ ಸಂಪನ್ಮೂಲವಾಗಿ ಉಪಯೋಗಿಸುವ ಮೇಲ್ವಿಚಾರಣಾ ಪ್ರಕ್ರಿಯೆಯನ್ನು ಹೇಗೆ ಹುಟ್ಟು ಹಾಕಿದರು ?
- ಶ್ರೀ ಕುಮಾರ್ ಅವರು ವಿದ್ಯಾರ್ಥಿಗಳ ಕಲಕಾ ಫಲಕೃತಿಯ ಪ್ರಭಾವವನ್ನು ಗುರುತಿಸಿದರು ಎಂಬುದನ್ನು ನೀವು ಹೇಗೆ ಯೋಚಿಸುವಿರಿ ?
- ಈ ವ್ಯಕ್ತಿ ಅಧ್ಯಯನದಿಂದ ನಿಮ್ಮದೇ ಸನ್ನಿವೇಶದಲ್ಲಿ ಸಂಪನ್ಮೂಲ ನಿರ್ವಹಣೆಯನ್ನು ಹೇಗೆ ಅನ್ವಯಯಿಸಬುದೆಂಬುದನ್ನು ತಿಳಿದು ಕೊಂಡಿರುವಿರಿ ( ಅರಿತುಕೊಂಡಿರುವಿರಿ )

**ಚರ್ಚೆ:–**

ಶ್ರೀ ಕುಮಾರ್ ಅವರು ಶಾಲಾ ಪರಿಸರವನ್ನು ಕಲಿಕಾ ಸಂಪನ್ಮೂಲವನ್ನು ನಿರ್ವಹಣೆ ಮಾಡುವ ಯೋಜನೆಯನ್ನು ಕೈಗೊಂಡರುಇದು ಶಾಲೆಯನ್ನು ಹೆಚ್ಚು ಆಕರ್ಷಣೀಯವನ್ನಾಗಿಸುವ ಮತ್ತು ವಿದ್ಯಾರ್ಥಿಗಳು ಹೆಮ್ಮೆಪಡುವ ಅರ್ಥದಲ್ಲಿ ಲಾಭದಾಯಕವಾಯಿತು. ಅವರಿಗೆ ಚಟುವಟಿಕೆಗಳನ್ನು ನಿರ್ವಹಿಇಸುವ ಮತ್ತು ಜನರು ಅವರ ಗುರಿ ಮುಟ್ಟುವುದರ ಅಗತ್ಯವಿತ್ತು. ಜನರು ಶಾಲೆಯ ಒಂದು ಭಾಗ ಮತ್ತು ವ್ಯಾಪಕ ಸಮುದಾಯ ಅದರ ಒಂದು ಪ್ರಮುಖ ಸಂಪನ್ಮೂಲ ಕೆಲವರು ತಮ್ಮ ಸಮಯವನ್ನು ಕೊಡಲು ಅಥವಾ ಪರಿಣಿತಿಯನ್ನು ಕೊಡಲು ಸಾಧ್ಯವಾಗಬಹುದು ಮತ್ತು ಕೆಲವರು ಆರ್ಥಿಕ ಸಹಾಕರವನ್ನು ನೀಡಲು ಸಾಧ್ಯವಾಗಬಹುದು. ಶ್ರೀ ಕುಮಾರ್ ಅವರು ಬಾಳುವ ಅವರ ಸಮಯ ಮತ್ತು ಪರಿಣಿತಿಯನ್ನು ದೊಡ್ಡ ಪ್ರಮಾಣದಲ್ಲಿ ಅವರ ಸಹಾಯ / ಸಹಕಾರದೊಂದಿಗೆ ನಿರ್ವಹಣೆ ಮಾಡಿದರು. ಶಾಲಾ ನಾಯಕ ಜನರನ್ನು ಶಾಲೆಗೆ ಸಂಪನ್ಮೂಲಗಳ ಕೊಡುಗೆ ನೀಡಲು ಪ್ರೇರಣೆ ಮತ್ತು ಸ್ಪೂರ್ತಿ ನೀಡುತ್ತಾರೆ ಮತ್ತು ಅವರ ಪ್ರಯತ್ನವನ್ನು ಶಾಲಾ ಕಲಿಕಾ ಫಲಶೃತಿಗಳಿಗನುವಾಗಿ ಒಂದು ಸಮಗ್ರ ಯೋಜನೆಯನ್ನು ನಿರ್ವಹಿಸುತ್ತಾರೆ.

ವಿಡಿಯೋ : ಸ್ಥಳೀಯ ಸಂಪನ್ಮೂಲಗಳನ್ನು ಬಳಸಿ

## ಚಟುವಟಿಕೆ 4: ಸಿಬ್ಬಂದಿ ಪಾಲ್ಗೊಳ್ಳುವಿಕೆಗೆ, ಸಿದ್ಧತೆ

ಶ್ರೀ ಕುಮಾರ್ ಅವರು ಲಭ್ಯವಿರುವ ಸಂಪನ್ಮೂಲಗಳ ಉತ್ತಮ ಬಳಕೆಯ ಬಗ್ಗೆ ಚರ್ಚಿಸಲು ತಮ್ಮ ಸಿಬ್ಬಂದಿಯೊಂದಿಗೆ ಕೂಡಲೇ ತೊಡಗಿಸಿಕೊಳ್ಳುತ್ತಾರೆ. ಶಾಲಾ ನಾಯಕರಾಗಿ ಅವರು ತಮ್ಮ ಸಿಬ್ಬಂದಿಯೊಂದಿಗೆ ಸಮಸ್ಯೆ ಪರಿಹರಿಸುವ ಒಂದು ಸಂವಹನ ( ಸಂವಾದ ) ವನ್ನು ಪ್ರಾರಂಭಿಸುತ್ತಾರೆ. ನೀವು ಈಗಾಗಲೇ ಇತರರನ್ನು ಪಟ್ಟಿಮಾಡಲು ಅಥವಾ

ಸಂಪನ್ಮೂಲಗಳ ಬಳಕೆಯ ವರ್ಗೀಕರಣಕ್ಕೆ ಸೇರಿಸಿಕೊಂಡಿದ್ದರೆ. ನಿಮ್ಮ ಸಹೋದ್ಯೋಗಿಗಳು ಸಂಶೋಧನೆಗೆ ತೆರೆದುಕೊಳ್ಳುತ್ತಾರೆ. ತಮ್ಮ ನಿರಂತರ ಕೆಲಸದ ಹಾದಿ ( ಕಾರ್ಯ ವೈಕರಿ ) ಯನ್ನು ಬದಲಾಯಿಸುವು ಯಾವುದೇ ಸಲಹೆಯನ್ನು ಸಂದೇಹಾತ್ಮಕವಾಗಿ ನೋಡುವ ಸಹೋದ್ಯೋಗಿಗಳು ನಿಮಗಿರಬಹುದು.

ನೀವು ಗುರುತಿಸಿರುವ ಸಂಪನ್ಮೂಲಗಳ ಶ್ರೇಣಿ ಬಿ. ಸಿ. ಅಥವಾ ಡಿ ಯನ್ನು ನೋಡಿ ನಿಮ್ಮ ಕಲಿಕಾ ದಿನಚರಿಯಲ್ಲಿ ಕೆಲಗಿನ ಪ್ರಶ್ನೆಗಳನ್ನು ಪರಿಗಣಿಸಿ ಮತ್ತು ನಿಮ್ಮ ಯೋಚನೆಗಳನ್ನು ಪಟ್ಟಿಮಾಡಿ.

- ವಿದ್ಯಾರ್ಥಿಗಳ ಕಲಿಕೆಯನ್ನು ಪರಿಣಾಮಕಾರಿಯಾಗಿ ಬೆಂಬಲಿಸುವಂತೆ ಮಾಡಲು ಈ ಸಂಪನ್ಮೂಲಗಳು ನಿಮಗೆ ಏಕೆ ಅಗತ್ಯ ?
- ನಿಮ್ಮ ಸಿಬ್ಬಂದಿಯೊಂದಿಗೆ ಈ ಸಂವಾದವನ್ನು ಹೇಗೆ ಪ್ರಾರಂಭಿಸುವಿರಿ ?
- ತಾವು ಕಾರ್ಯ ವೈಕರಿಯನ್ನು ಬದಲಾಯಿಸಲು ಪ್ರತಿರೋಧಿಸುವ ನಿಮ್ಮ ಸಿಬ್ಬಂದಿ ಮತ್ತು ಸಹೋದ್ಯೋಗಿಗಳನ್ನು ಹೇಗೆ ಜಯಿಸುವಿರಿ ? ( ಎದುರಿಸುವಿರಿ )
-

**ಚರ್ಚೆ:–**

ಸಂಪನ್ಮೂಲಗಳನ್ನು ವ್ಯಾಪಕವಾಗಿ ಬಳಸಿಕೊಳ್ಳುಲು ಒಬ್ಬ ಶಾಲಾ ನಾಯಕರಾಗಿ ನೀವು ನಿಮ್ಮ ಸಿಬ್ಬಂದಿಗೆ ಮಾರ್ಗದರ್ಶನ ಮತ್ತು ಉತ್ಸಾಹಿಗಳಾಗಿ ತೊಡಗಿಸಿಕೊಳ್ಳುವ ಅಗತ್ಯವಿದೆ. ಮೊದಲಿಗೆ ಶಾಲಾ ಹೊರಗಿನ ಸಂಪನ್ಮೂಲಗಳನ್ನು ಸೆಳೆಯಲು ಮತ್ತು ಲಭ್ಯವಿರುವ ಸಂಪನ್ಮೂಲಗಳನ್ನು ಸೃಜನಾತ್ಮಕಕವಾಗಿ ಬಳಸಲು ಅವರಿಗೆ ಮಾರ್ಗದರ್ಶನದ ಅಗತ್ಯವಿದೆ. ಯಾವುದೇ ತರಗತಿ ಕೋಣೆಯಲ್ಲಿ ಸ್ವತಃ ವಿದ್ಯಾರ್ಥಿಗಳೇ ಉತ್ಕೃಷ್ಟ ಸಂಪನ್ಮೂಲಗಳಾಗಿರುತ್ತಾರೆ. ಅವರು ಅನುಭವ ಮತ್ತು ಜ್ಞಾನದ ಸಂಪತ್ತುಗಳಾಗಿದ್ದು ಅವರ ಗೆಳೆಯರ ( ಸಹಪಾಠೀಗಳ ) ಕಲಿಕೆಯನ್ನು ವರ್ಧಿಸಲು ಶಿಕ್ಷಕರು ಅವುಗಳನ್ನು ಉಪಯೋಗಿಸಬಹುದು.

ನೀವು ನಿಮ್ಮ ಸಿಬ್ಬಂದಿಯವರಿಗೆ ವಿಭಿನ್ನವಾಗಿ ಕೆಲಸ ಮಾಡಲು ಉದಾಹರಣೆ ನೀಡುವುದರ ಮೂಲಕ ಸ್ಪೂರ್ತಿದಾಯಕರಾಗುವ ಬಗ್ಗೆ ಯೋಚಿಸಬಹುದು ಉದಾ: ಜೀವಾಶಾಸ್ತ್ರ ಪಾಠವು ವಿದ್ಯಾರ್ಥಿಗಳಿಗೆ ಎಲೆಗಳನ್ನು ಶಾಲೆಗೆ ತಂದು ವರ್ಗೀಕರಿಸುವಂತೆ ತೊಡಗಿಸಬಹುದು ಅಥವಾ ವಿದ್ಯಾರ್ಥಿಗಳು ಒಂದು ಇಂಗ್ಲೀಷ್ ಪಾಠದ ಶಬ್ದಕೋಶ ( ಪದಕೋಶ) ವನ್ನು ವೃದ್ಧಿಪಡಿಸಲು ಆಹಾರ ಮತ್ತು ಅದರ ಪೌಷ್ಠಿಕಾಂಶಗಳ ಪ್ಯಾಕೇಜಿನ ಒಂದು ತುಂಡನ್ನು ತರುತ್ತಾರೆ. ನಿಮ್ಮ ಶಿಕ್ಷಕರು ಪರಸ್ಪರ ಹೇಗೆ ಕಲಿಯುತ್ತಾರೆ ಎಂಬುದನ್ನು ಕುರಿತು. ನೀವು ಯೋಚಿಸಬಹುದು ಅಥವಾ ಬೇರೆ ಶಾಲೆಯ ಶಿಕ್ಷಕರಿಂದ – ಶಿಕ್ಷಕರು ತಮ್ಮ ಸಹೋದ್ಯೋಗಿಗಳು ಅವರೊಂದಿಗೆ ಯಶಸ್ವಿಯಾಗುವುದನ್ನು ಕಂಡಾಗ ಜನರು ತಮ್ಮ ಹೊಸ ಯೋಜನೆಗಳಿಗೆ ಕಡಿಮೆ ಪ್ರತಿರೋದಗಳಾಗಿರುತ್ತಾರೆ.

ನಿಮ್ಮ ಶಾಲೆಯಲ್ಲಿ ಸಂಪನ್ಮೂಲಗಳ ಬಳಕೆಯನ್ನು ಉತ್ತಮಪಡಿಸುವುದರ ಚರ್ಚೆಯಲ್ಲಿ ಅವರನ್ನು ತೊಡಗಿಸಿಕೊಂಡು ತಂಡದಲ್ಲಿ ವಿಚಾರ ವಿನಿಮಯ ಮಾಡುವುದರ ಉಪಯೋಗಿಸುವುದುರ ಬಗ್ಗೆ ಸಂಪನ್ಮೂಲ ( 1 ) ರ ಟೇಬಲ್‌ನಲ್ಲಿ ಕಾಣಬಹುದು. ಸಂಪನ್ಮೂಲ ( 2) ರ ಚರ್ಚೆಯ ವಿಚಾರ ವಿನಮಯಕ್ಕೆ ಸಹಾಯಕ ಕರ ಪತ್ರವಾಗಿದೆ.

## ಚಟುವಟಿಕೆ 5: ನಿಮ್ಮ ಸಿಬ್ಬಂದಿಯೊಂದಿಗೆ ಸಂಪನ್ಮೂಲಗಳ ನಿರ್ವಹಣೆಯ ಯೋಜನೆ ಕುರಿತಾದ ಗೋಷ್ಠಿ

ಶಾಲೆಯಲ್ಲಿ ಯಾವ ಸಂಪನ್ಮೂಲಗಳು ಲಭ್ಯವಿದೆ ಮತ್ತು ಸಿಬ್ಬಂದಿಯನ್ನು ಬಳಸಿಕೊಂಡು ಇರುವ ಸಂಪನ್ಮೂಲಗಳನ್ನು ಸಂಪನ್ಮೂಲಗಳ ಬಳಸಿಕೊಳ್ಳಲಾಗುತ್ತಿದೆಯೇ ಎಂಬುದನ್ನು ಅರ್ಥಮಾಡಿಕೊಳ್ಳುವುದು. ಶಾಲಾ ನಾಯಕರಾಗಿರುವ ನೀವು ಸಂಪನ್ಮೂಲಗಳನ್ನು ಕಡಿಮೆಮಟ್ಟದಲ್ಲಿ ಬಳಸಿಕೊಂಡಿರುವುದಕ್ಕೆ ಅಥವಾ ಬಳಸಿಕೊಳ್ಳದೇ ಇರುವ ಸಮಸ್ಯೆಯನ್ನು ಉದ್ದೇಶಿಸಿ ಅದರ ಅಗತ್ಯತೆಯ ವಿಚಾರಗಳನ್ನು ವಿವರಿಸಬೇಕು.

ಮತ್ತು ಇದರ ಪರಿಣಾಮಗಳು ಕಲಿಕೆಯ ಫಲಿತಾಂಶಗಳಾಗಿರಬಹುದು. ಈ ವರ್ಗೀಕರಣದಲ್ಲಿ ಮಾನವ ಸಂಪನ್ಮೂಲಗಳನ್ನು ನಿಮ್ಮ ಸಿಬ್ಬಂದಿಯ ಸಹದ್ಯೋಗಿಯ ಸಹಾಯದಿಂದ ಗುರುತಿಸಬಹುದು. ಈ ಪ್ರಕಿಯೆಯ ಆರಂಭವನ್ನು ನಿಮ್ಮ ಸಿಬ್ಬಂದಿಯನ್ನು ಈ ಸಮಸ್ಯೆಗಳ ಬಗ್ಗೆ ಆಲೋಚನೆಗಳಲ್ಲಿ ಭಾಗವಹಿಸಲು ಆಹ್ವಾನಿಸಬೇಕು.

- ಈ ಗೋಷ್ಠಿಯ ಯೋಜಿನಯ ಕಲಿಕಾ ಡೈರಿಯಲ್ಲಿ ಟಿಪ್ಪಣಿಯನ್ನು ಬರೆದುಕೊಳ್ಳಿ. ನಂತರದಲ್ಲಿ ಹೇಗೆ ನಡೆಯಿತೆಂದು ಮೌಲ್ಯಮಾಪನ ಮಾಡಿಕೊಳ್ಳಿ ಮತ್ತು ನೀವು ಇನ್ನೊಮ್ಮೆ ಮಾಡುವಾಗ ಹೇಗೆ ಬೇರೆ ರೀತಿಯಲ್ಲಿ ಮಾಡಬಹುದು ಎಂಬುದರ ಬಗ್ಗೆ ಟಿಪ್ಪಣಿ ಮಾಡಿಕೊಳ್ಳಿ. ಕೆಳಗೆ ನೀಡಿರುವ ಕೆಲವು ಅಂಶಗಳು ಸಭೆಯ ಮುಂದುವರಿಕೆಗೆ ಆಧಾರವಾಗಬಹುದು.
- ಸಂಪನ್ಮೂಲಗಳ ಕಡಿಮೆಮಟ್ಟದಲ್ಲಿ ಬಳಕೆ ಅಥವಾ ಬಳಸಿಕೊಳ್ಳದೇ ಇರುವ ಸಮಸ್ಯೆಯನ್ನು ಉದ್ದೇಶಿಸಿ ಕೆಲಸ ಮಾಡುವ ಹಿಂದಿರುವ ವೈಚಾರಿಕತೆಯ ಬಗ್ಗೆ ಪರಿಚಯಿಸಿ, ಇದು ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತಮಪಡಿಸುವಲ್ಲಿ ನಿಕಟವಾದ ಸಂಬಂಧವಿದೆ ಎಂಬುದನ್ನು ಖಚಿತವಾಗಿ ತಿಳಿಸಿ. ಇದರ ಬಗ್ಗೆ ಇದುವರೆಗೂ ನೀವು ಮಾಡಿರುವ ಕೆಲಸಗಳು ಮತ್ತು ಅದರಿಂದ ನೀವೇನೂ ಕಲಿತಿದ್ದೀರೆಂಬುದನ್ನು ತಿಳಿಸಿ.
- ಸಂಪನ್ಮೂಲಗಳನ್ನು ವಿಸ್ತಾರವಾಗಿ ನೋಡುವ ಅಗತ್ಯತೆಯ ಬಗ್ಗೆ ಪರಿಚಯಿಸಿ ಮತ್ತು ಯಾವುದು ಶೈಕ್ಷಣಿಕ ಸಂಪನ್ಮೂಲವಾಗಬಹುದು ಎಂದು ತಿಳಿಸಿ. ನೀವು ಬೇರೆ ಬೇರೆ ವರ್ಗಗಳ ಬಗ್ಗೆ ವಿವರಿಸಬಹುದು ಮತ್ತು ಪ್ರತಿಯೊಂದು ವರ್ಗದಲ್ಲೂ ಲಭ್ಯವಿರುವ ಸಂಪನ್ಮೂಲಗಳ ಬಗ್ಗೆ ಆಲೋಚಿಸಲು ತಿಳಿಸಿ,ಇವುಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡಿ.
- ಶಾಲಾ ಸಮುದಾಯದಲ್ಲಿ, ಇನ್ನಿತರ ವಿಷಯಗಳೊಂದಿಗೆ ಅಥವಾ ಇನ್ನಿತರ ಪಠ್ಯ ಕ್ಷೇತ್ರಗಳಿಗೆ ಸಂಬಂಧಿಸಿದ ಸಂಪನ್ಮೂಲಗಳನ್ನು ಕಡಿಮೆಮಟ್ಟದಲ್ಲಿ ಬಳಕೆ ಅಥವಾ ಬಳಸಿಕೊಳ್ಳದೇ ಇರುವ ಸಂಪನ್ಮೂಲಗಳನ್ನು ಗುರುತಿಸಲು ಜೊತೆಯಾಗಿ ಕೆಲಸ ಮಾಡುವುದು ಹೇಗೆ ಎನ್ನುವುದರ ಬಗ್ಗೆ ಚರ್ಚಿಸಿ.

ವಿದ್ಯಾರ್ಥಿಗಳ ಕಲಿಕೆಯನ್ನು ಬೆಂಬಲಿಸಿ ಪ್ರತಿಯೊಬ್ಬರ ಕೌಶಲ್ಯ ಮತ್ತು ಜನವನ್ನು ಬಳಸಿಕೊಳ್ಳುವುದರ ಬಗ್ಗೆ ಒಂದು ಗುಂಪಾಗಿ ಚರ್ಚಿಸಿ.( ಇದು ಪೋಷಕರು, ವಿದ್ಯಾರ್ಥಿಗಳು ಮತ್ತು ಸಮುದಾಯದ ಇತರರು ಸೇರಿದಂತೆ ಶಿಕ್ಷಕರನ್ನು ಒಳಗೊಳ್ಳುತ್ತದೆ.

- ಇದನ್ನು ವಿಮರ್ಶಿಸುವ ಮೊದಲು ಸಂಪನ್ಮೂಲಗಳು ಅಥವಾ ಚಟುವಟಿಕೆಗಳನ್ನು ಪೂರ್ಣಗೊಳಿಸಲು ನಿರ್ದಿಷ್ಟ ದಿನಾಂಕವನ್ನು ನಿಗದಿಪಡಿಸಿ, ಇದನ್ನು ವಿದ್ಯಾರ್ಥಿಗಳ ಕಲಿಕೆಯ ಫಲಿತಾಂಶಗಳೊಂದಿಗೆ ತಾಳೆ ಮಾಡುವುದನ್ನು ನೆನಪಿಟ್ಟುಕೊಳ್ಳಿ.
- ಲಭ್ಯವಿರುವ ಸಂಪನ್ಮೂಲಗಳನ್ನು ಉತ್ತಮವಾಗಿ ಬಳಸಿಕೊಳ್ಳಲು ರೂಪಿಸಿರುವ ಯೋಜನೆಯ ಜಾರಿಗಾಗಿ ಸ್ವಯಂ ಸೇವಕರನ್ನು ಹುಡುಕಿ. ಅದಕ್ಕಾಗಿ ಅನುಸರಣಾ ಸಭೆಯನ್ನು ಕರೆಯಿರಿ.

**ಚರ್ಚೆ:**

ಉತ್ತಮ ಫಲಿತಾಂಶಗಳು ಬರಲು ಇಂತಹ ಯೋಜನಾ ಗೋಷ್ಠಿಗಳನ್ನು ರೂಪಿಸಬೇಕು. ವಿದ್ಯಾರ್ಥಿಗಳೊಂದಿಗೆ, ನೀಡುವ ಮಾಹಿತಿಗಳು ಮತ್ತು ಸೂಚನೆಗಳ ನಡುವೆ ಸಮತೋಲನವಿರಬೇಕು, ಮತ್ತು ನಿಮ್ಮ ಸಿಬ್ಬಂದಿಯನ್ನು ಸಕ್ರಿಯವಾಗಿ ಭಾಗವಹಿಸುವಂತೆ ಮಾಡಿ. ನೀವು ಹೊಸದೊಂದು ದೃಷ್ಟಿಕೋನವನ್ನು ಪರಿಚಯಿಸುವಾಗ ಮತ್ತು ಆಚರಣೆಯಲ್ಲಿ ಬದಲಾಣೆಗಳನ್ನು ಹುಡುಕುವಾಗ ನೀವು ಮಾದರಿ ಕ್ರಿಯಾಶೀಲ ಕಲಿಯುವವರಾಗಿರಬೇಕು. ಜನರು ಹೊಸದೊಂದು ಆಯಾಮವೆಂದು ಅರ್ಥಮಾಡಿಕೊಂಡಾಗ ನೀವು ಅದನ್ನು ಬದಲಾವಣೆ ತರಲು ಮಾಡುವ ಸಹಾಯವೆಂದು ಭಾವಿಸಿ, ಇದನ್ನು ತಮಗೆ ತೊಂದರೆ ತರುತ್ತದೆ ಎಂದು ಅಂದುಕೊಳ್ಳದೆ ಅವಕಾಶವೆಂದು ತಿಳಿದುಕೊಳ್ಳುತ್ತಾರೆ. ಈ ಸನ್ನಿವೇಶದಲ್ಲಿ ನೀವು ನಿಮ್ಮ ಸಿಬ್ಬಂದಿಯನ್ನು ಇನ್ನೂ ಹೆಚ್ಚಿನದನ್ನೂ, ಶಕ್ತಿಯನ್ನು ಮತ್ತು ಪಾಠಗಳಲ್ಲಿ ಹಲವಾರು ಸಂಪನ್ಮೂಲಗಳನ್ನು ಹೊಂದಿಸಲು ಆಹ್ವಾನಿಸಿ: ಇದು ಅವರಿಗೆ ಉತ್ಸಾಹವನ್ನು ತುಂಬಬಲ್ಲದು.

ಸಂಪನ್ಮೂಲ–2 ನಿಮ್ಮ ಸಿಬ್ಬಂದಿಗೆ ಉಪಯುಕ್ತವಾದ ಕರಪತ್ರವಾಗಬಹುದು.

ಸಂಪನ್ಮೂಲಗಳನ್ನು ವಿಸ್ತೃತವಾಗಿ ನೋಡುವುದರಿಂದಾಗುವ ಅನುಕೂಲಗಳನ್ನು ಕೇಸ್‌ಸ್ಟಡಿಗಳ ಮೂಲಕ ಕೇಸ್‌ಸ್ಟಡಿ2 ರಲ್ಲಿ ಹೇಳಿರುವಂತೆ ಹಂಚಿಕೊಳ್ಳಬಹುದು. ಇದೊಂದು ಶಾಲಾ ಶಿಕ್ಷಕಿಯೊಂದಿಗಿನ ಸಂದರ್ಶನವಾಗಿದ್ದು ಆಕೆ ತನ್ನ ಶಾಲೆಯಲ್ಲಿ ಕ್ಷೇತ್ರ ಪ್ರವಾಸವನ್ನು ಕಲಿಕಾ ಸಂಪನ್ಮೂಲವಾಗಿ ಪರಿಚಯಿಸಿದಳು ಎಂಬುದನ್ನು ಕುರಿತದ್ದಾಗಿದೆ. ಆಕೆ ಈ ಪ್ರವಾಸವು ಹೇಗೆ ಕಲಿಕೆಯನ್ನು ಶ್ರೀಮಂತಗೊಳಿಸಲು ದೊರೆತ ಅವಕಾಶವಾಗಿತ್ತು ಎನ್ನುವುದನ್ನು ವಿವರಿಸುತ್ತಾಳೆ,ಇದರೊಂದಿಗೆ ಪ್ರವಾಸಕ್ಕಾಗಿ ಯೋಜನೆ ಮತ್ತು ಸಂಘಟನೆಯು ಕೆಲಸದ ಹೊರೆಯನ್ನು ಹೆಚ್ಚಿಸಿತು ಎಂಬುದನ್ನು ಗುರುತಿಸುತ್ತಾಳೆ. ಸಾರಿಗೆಗಾಗಿ ಹಣಕಾಸಿನ ಪರಿಣಾಮ ಅಥವಾ ಶುಲ್ಕ ಪಾವತಿಯೂ ಇರಬಹುದು, ಇದನ್ನು ಯಾವುದೇ ಯೋಜನೆಗಳಲ್ಲಿ ಅಳವಡಿಸಲೇಬೇಕು.



**ಚಿತ್ರ 2: ನಿಮ್ಮ ಶಾಲೆಯ ಸಂಪನ್ಮೂಲಗಳ ನಿರ್ವಹಣೆಯು ನಿಮ್ಮ ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತಮಪಡಿಸುತ್ತದೆ.**

## ಕೇಸ್‌ಸ್ಟಡಿ2: ಶಾಲಾ ಶಿಕ್ಷಕಿಯೊಂದಿಗೆ ಶಾಲೆಯಲ್ಲಿ ಕ್ಷೇತ್ರ ಪ್ರವಾಸಗಳನ್ನು ಪರಿಚಯಿಸಿದ್ದರ ಕುರಿತಾಗಿ ಸಂದರ್ಶನ

**ಸಂದರ್ಶಕರು:** ನೀವು ಪ್ರತಿ ತರಗತಿಗೆ ವಾರ್ಷಿಕವಾಗಿ ಎರಡು ಕ್ಷೇತ್ರ ಪ್ರವಾಸಗಳನ್ನು ಕೈಗೆತ್ತಿಕೊಂಡಿದ್ದಿರಿ. ನಿಮ್ಮ ಶಾಲಾ ಜೀವನದಲ್ಲಿ ಇದೊಂದು ಅಂತಹ ಪ್ರಮುಖ ಅಂಶವಾಗಿದ್ದು ಏಕೆ?

**ಶಾಲಾ ನಾಯಕಿ:** ವಿದ್ಯಾರ್ಥಿಗಳು ಪುಸ್ತಕದಲ್ಲಿರುವಂತೆ ಮಾತ್ರ ಪರಿಕಲ್ಪನೆಗಳನ್ನು ಕಲಿಯುತ್ತಿದ್ದಾರೆ ಇವುಗಳು ಅವರ ವಾಸ್ತವಿಕ ಜೀವನಕ್ಕೆ

ಸಂಬಂಧಿಸಿದವಾಗಿಲ್ಲ ಎಂಬುದನ್ನು ನಾನು ಅರಿತುಕೊಂಡೆ. ಹಾಗೆಯೇ ಪತ್ರಗಳನ್ನು ಸಂವಹನದ ಮಾಧ್ಯಮವೆಂದು ತಿಳಿದುಕೊಂಡಿದ್ದರೆ ಹೊರತು, ಅವರು ಯಾವತ್ತೂ ಪತ್ರಗಳನ್ನೇ ಬರೆದಿರಲಿಲ್ಲ– ಮಾತ್ರವಲ್ಲ ಅಂಚೆ ಕಛೇರಿಗೆ ಭೇಟಿಯನ್ನೇ ಕೊಟ್ಟಿರಲಿಲ್ಲ,ಅಂಚೆ ಕಛೇರಿ ಕೂಡ ಶಾಲೆಯಿಂದ ಕೆಳಗಡೆ ಇರುವ ರಸ್ತೆಯಿಲ್ಲಿದ್ದಾಗ್ಯೂ ಕೂಡ. ಹಿರಿಯ ವಿದ್ಯಾರ್ಥಿಗಳು ಕೀಟಾಣುಗಳು ಮತ್ತು ನೈರ್ಮಲ್ಯೀಕರಣದ ಬಗ್ಗೆ ಕಲಿಯುತ್ತಾರೆ, ಆದರೆ ಯಾರಿಗೂ ಕೂಡ ಪರೀಕ್ಷಾಲಯವೂ ಹತ್ತಿರದ ಪಟ್ಟಣದಲ್ಲಿದ್ದು ಅಲ್ಲಿಗೆ ವೈದ್ಯರು ಪರೀಕ್ಷೆಗಾಗಿ ರಕ್ತ ಮಾದರಿಗಳನ್ನು ಕಳುಹಿಸುತ್ತಾರೆ ಎನ್ನುವುದು ಯಾರ ಅರಿವಿಗೂ ಬಂದಿರಲಿಲ್ಲ. ಈ ವಿಷಯಗಳನ್ನು ಅವರು ಅರ್ಥಮಾಡಿಕೊಳ್ಳಬೇಕು ಎಂದು ನನಗೆ ಅನ್ನಿಸಿತು. ಹಾಗಾಗಿ ನಾನು ಶಿಕ್ಷಕರೊಂದಿಗೆ ಮಾತನಾಡಿದೆ.

**ಸಂದರ್ಶಕರು** ಮತ್ತು ಅವರು ಒಪ್ಪಿಕೊಂಡರು?

**ಶಾಲಾ ನಾಯಕಿ:** ಒಳ್ಳೆಯದು, ಶಿಕ್ಷಕರು ನನ್ನನ್ನು ಕೇಳಿದರು ಇಷ್ಟೊಂದು ವಿದ್ಯಾರ್ಥಿಗಳನ್ನು ಹೇಗೆ ಕರೆದೊಯ್ಯುವುದು ಮತ್ತು ಪ್ರಯೋಗಲಾಯದವರು ಒಪ್ಪಿಕೊಳ್ಳುತ್ತಾರೆಯೇ ಎಂದು. ನಾನು ಶಿಕ್ಷಕರಿಗೆ ಹೇಳಿದೆ, ತರಗತಿವಾರು ವಿದ್ಯಾರ್ಥಿಗಳ ಭೇಟಿಗಾಗಿ ಯೋಜನೆಯನ್ನು ರೂಪಿಸುವಂತೆ ಹೇಳಿದೆ ಮತ್ತು ನಂತರ ಪೋಷಕರನ್ನೂ ಸಂಪರ್ಕಿಸಿದೆವು ಹಾಗೂ ನಾವೇನೂ ಮಾಡಬೇಕೆದಿಂದ್ದೇವೆ ಎನ್ನುವುದನ್ನು ಹೇಳಿದೆವು.

**ಸಂದರ್ಶಕರು:** ಪೋಷಕರೇಕೆ?

**ಶಾಲಾ ನಾಯಕಿ:** ಇದನ್ನು ಕಾರ್ಯರೂಪಕ್ಕೆ ತರಲು ನಮ್ಮಲ್ಲಿ ಸಂಪನ್ಮೂಲಗಳಿರಲಿಲ್ಲ, ಪೋಷಕರು ಇದಕ್ಕೆ ಕೊಡುಗೆ ನೀಡಬಹುದು ಎಂದು. ಪೋಷಕರಲ್ಲಿ ಒಬ್ಬರು ಬಸ್ ಸೇವೆಯನ್ನು ನೀಡುತ್ತಾರೆ ಮತ್ತು ಅವರು ಬಸ್‌ನ ವೆಚ್ಚವನ್ನು ಭರಿಸಲು ಒಪ್ಪಿಕೊಂಡರು. ಇತರರು ಸ್ವಲ್ಪ ಹಣವನ್ನು ನೀಡಲು ಒಪ್ಪಿಕೊಂಡರು.

**ಸಂದರ್ಶಕರು:** ಭೇಟಿಯು ಸುಲಭವಾಗಿ ನಿರ್ವಹಿಸಲಾಯಿತು ಅಲ್ಲವೇ?

**ಶಾಲಾನಾಯಕಿ:** ವಾಸ್ತವವಾಗಿ, ಒಮ್ಮೆ ನಿರ್ಧರಿಸಿದಲ್ಲಿ ಉಳಿದ ಕೆಲಸಗಳು ತುಂಬಾ ಸಲೀಸಾಗುತ್ತವೆ, ಆದರೂ ಕೂಡ ನಾವು ಹೆಚ್ಚಿನ ಯೋಜನೆಯನ್ನು ಕೈಗೆತ್ತಿಕೊಂಡೆವು. ಶಿಕ್ಷಕರು ಸ್ಥಳಕ್ಕೆ ಭೇಟಿ ನೀಡಿ ಅನುಮತಿಯನ್ನು ಪಡೆದುಕೊಂಡರು ಮತ್ತು ನಾವೇನು ಮಾಡುತ್ತಿದ್ದೇವೆ ಮತ್ತು ಏಕೆ ಮಾಡುತ್ತಿದ್ದೇವೆ ಎನ್ನುವುದನ್ನು ವಿವರಿಸಿದರು. ವಿದ್ಯಾರ್ಥಿಗಳಿಗೆ ಈ ಭೇಟಿಯನ್ನು ಹೇಗೆ ಪರಿಚಯಿಸಬೇಕೆಂದು ಆಲೋಚಿಸಿದೆವು, ಹೇಗೆ ಪ್ರಶ್ನೆಗಳನ್ನು ಸಂಗ್ರಹಿಸುವುದು ಮತ್ತು ಪಡೆದುಕೊಂಡ ಮಾಹಿತಿಯನ್ನು ಹೇಗೆ ಹಿಂದಿರುಗಿಸುವುದು ಎನ್ನುವುದರ ಬಗ್ಗೆಯೂ ಆಲೋಚಿಸಿದೆವು.

**ಸಂದರ್ಶಕರು:** ಏಳನೇ ತರಗತಿಯಲ್ಲಿರುವ ವಿದ್ಯಾರ್ಥಿಗಳು ಕಟ್ಟಡದ ಚಿತ್ರವನ್ನು ಬಿಡಿಸಿರುವುದನ್ನು ಗಮನಿಸಿದೆ.

**ಶಾಲಾನಾಯಕಿ:** ಇತ್ತೀಚಿಗೆ ಏಳನೇ ತರಗತಿಯ ವಿದ್ಯಾರ್ಥಿಗಳು ನಮ್ಮಿಂದ ಮೂರು ರಸ್ತೆಗಳ ಮುಂದಿರುವ ಸ್ಥಳದಲ್ಲಿ ಕಟ್ಟುತ್ತಿರುವ ಕಟ್ಟಡದ ಸ್ಥಳಕ್ಕೆ ಭೇಟಿ ನೀಡಿದ್ದರು. ಸಾಕಷ್ಟು ಮಾಹಿತಿಯನ್ನು ಅಡಿಪಾಯಕ್ಕಾಗಿ ಹೇಗೆ ಅಗೆಯಲಾಗುತ್ತದೆ ಎಂಬುದರ ಬಗ್ಗೆಯೂ ಪಡೆದುಕೊಂಡರು. ಅಲ್ಲಿ ಅಗೆಯುತ್ತಿದ್ದವರನ್ನು ನಾವು ಕರೆದೆವು, ಅವರನ್ನು ಆರ್ಕಿಟೆಕ್ಟ್‌ನ್ನು ಕರೆದುಕೊಂಡು ಬಂದರು ಮತ್ತು ಅವರು ವಿದ್ಯಾರ್ಥಿಗಳಿಗೆ ಅಡಿಪಾಯಕ್ಕಾಗಿ ಬೇರೆಬೇರೆ ರೀತಿಯಲ್ಲಿ ಅಗೆಯುವ ಬಗ್ಗೆ, ತಾವು ನಿರ್ಮಿಸಿರುವ ಕಟ್ಟಡಗಳ ಬಗ್ಗೆ ಯಾವ ರೀತಿಯ ಮಣ್ಣು ಕಟ್ಟಡ ಕಟ್ಟಲು ಸುಲಭ ಮತ್ತು ಯಾವುದು ಕಷ್ಟ ಎನ್ನುವುದನ್ನು ವಿವರಿಸಿದರು. ವಿದ್ಯಾರ್ಥಿಗಳು ನಗರದಲ್ಲಿರುವ ಎತ್ತರದ ಕಟ್ಟಡಗಳು ಮತ್ತು ತಾವು ವಾಸಿಸುತ್ತಿರುವ ಗುಡಿಸಲುಗಳ ನಡುವೆ ಇರುವ ವ್ಯತ್ಯಾಸಗಳ ಬಗ್ಗೆ ಮಾತನಾಡಿದರು. ಆರ್ಕಿಟೆಕ್ಟ್ ಕೂಡ ಮೆಚ್ಚುಗೆ ವ್ಯಕ್ತಪಡಿಸಿದರು. ಮರುದಿನ ಶಿಕ್ಷಕರೊಬ್ಬರು ತಮ್ಮ ಮನೆಯಲ್ಲಿರುವ ವಿವಿಧ ಕಟ್ಟಡಗಳ ಚಿತ್ರಗಳಿರುವ ಕ್ಯಾಲೆಂಡರನ್ನು ವಿದ್ಯಾರ್ಥಿಗಳಿಗೆ ತೋರಿಸಿದರು ಮತ್ತು ವಿದ್ಯಾರ್ಥಿಗಳು ತಾವು ಬದುಕುತ್ತಿರುವ ಕಟ್ಟಡಗಳ ರೀತಿಯ ಚಿತ್ರಗಳನ್ನು ಬಿಡಿಸಿದರು. ಹಾಗಾಗಿ ಇದೊಂದು ತೀವ್ರತೆ, ಬಲ, ತೂಕ, ಸಮೂಹಗಳ ಬಗ್ಗೆ ಕಲಿಯಲು ಉತ್ತಮ ದಾರಿಯಾಯಿತು.

## ಕೇಸ್‌ಸ್ಟಡಿ 6: ಜನರೂ ಸಂಪನ್ಮೂಲವೇ ಎನ್ನುವುದರ ಬಗ್ಗೆ ತಿಳಿಸುವುದು

ಕೇಸ್ ಸ್ಟಡಿ2 ಹಲವಾರು ರೀತಿಯಲ್ಲಿ ಜನರನ್ನು ಸಂಪನ್ಮೂಲವೆಂದು ಗುರುತಿಸುತ್ತದೆ. ಇದರ ಬಗ್ಗೆ ಪ್ರತಿಕ್ರಿಯಿಸಲು ಸ್ವಲ್ಪ ಸಮಯವನ್ನು ವಿನಿಯೋಗಿಸಿ. ಕೆಳಗೆಕೊಟ್ಟಿರುವ ಅಂಶಗಳನ್ನು ಮಾರ್ಗಸೂಚಿಗಳನ್ನಾಗಿ ಬಳಸಿ.

- ಏಳನೇ ತರಗತಿಯಲ್ಲಿರುವ ವಿದ್ಯಾರ್ಥಿಗಳ ಬಗ್ಗೆ ಆಲೋಚಿಸಿ. ಮತ್ತು ಅವರು ಕಟ್ಟಡಗಳ ಬಗ್ಗೆ ಕಲಿಯುತ್ತಿದ್ದಾರೆ ಎನ್ನುವುದರ ಬಗ್ಗೆಯೂ. ಅವರ ಕಲಿಕೆಯ ಅನುಭವವನ್ನು ಜೀವಂತವಾಗಿಸುವಲ್ಲಿ ಯಾರೆಲ್ಲಾ ಒಳಗೊಂಡಿದ್ದಾರೋ ಅವರೆಲ್ಲರ ಪಟ್ಟಿ ಮಾಡಿ. ಮತ್ತು ಅವರ ಏನನ್ನು ಕೊಡುಗೆಯನ್ನಾಗಿ ನೀಡಿದ್ದಾರೆ.
- ಜನರ ಬಗ್ಗೆಯೂ ಆಲೋಚಿಸಿ,( ಸಿಬ್ಬಂದಿ,ಪೋಷಕರು ಮತ್ತು ಸ್ಥಳೀಯ ಸಮುದಾಯದಲ್ಲಿರುವವರು), ಯಾರನ್ನು ಕಲಿಕೆಗೆ ಪ್ರಮುಖ

ಸಂಪನ್ಮೂಲವಾಗಬಲ್ಲರೆಂಬುದು, ಆದರೆ ಪ್ರಸ್ತುತ ಅಲ್ಲ. ನಿಮಗೆ ಕಲಿಸಬೇಕಿರುವ ವಿಷಯ ಅಥವಾ ವಸ್ತು ವಿಷಯದ ಬಗ್ಗೆ ಆಲೋಚಿಸುವುದು ಸುಲಭ ಮತ್ತು ನಂತರದಲ್ಲಿ ಆಲೋಚಿಸಿ ಯಾರು ನಿಮಗೆ ಸಹಾಯ ಮಾಡಬಲ್ಲರು ಎಂದು.

- ಈ ಜನರನ್ನು ಕಲಿಗೆ ಸಹಾಯವಾಗುವಂತೆ ಬಳಸಿಕೊಳ್ಳಲು ಇರುವ ಅಡೆ-ತಡೆಗಳು ಯಾವುವು ಮತ್ತು ಅಡೆತಡೆಗಳನ್ನು ಹೇಗೆ ನಿವಾರಿಸಿಕೊಳ್ಳಬಹುದು?

**ಚರ್ಚೆ:**

ಕೇಸ್ ಸ್ಟಡಿ2 ರ ಬಗ್ಗೆ ಆಲೋಚಿಸುತ್ತಾ ಮತ್ತು ಮೇಲೆ ಹೇಳಿರುವ ಪ್ರಶ್ನೆಗಳಿಗೆ ಉತ್ತರಿಸುವಾಗ ನಿಮ್ಮ ಸಿಬ್ಬಂದಿ ಮತ್ತು ಇತರರು ಬಳಕೆಯಾಗದ ಸಂಪನ್ಮೂಲಗಳ ಸಂಪತ್ತೇ ಇರುವುದು ನಿಮಗೆ ಅರಿವಾಗುತ್ತದೆ. ಕೇಸ್ ಸ್ಟಡಿಯಲ್ಲಿ ಹೇಳುವಂತೆ ಇದು ಪೋಷಕರು, ಅಥವಾ ಸ್ಥಳೀಯ ಸಮುದಾಯದ ಸದಸ್ಯರ ರೂಪದಲ್ಲಿದ್ದು ಇವರು ಕೊಡುಗೆ ನೀಡುವವರಾಗಿರುತ್ತಾರೆ. ಯಾವುದೇ ಹೊಸ ಯೋಜನೆಗಳು, ಜಂಟಿಯಾಗಿ ಹಮ್ಮಿಕೊಳ್ಳುವ ಚಟುವಟಿಕೆಯಾಗಿದ್ದಲ್ಲಿ ಅದು ಹೆಚ್ಚಿನಸಮಯವನ್ನು ತೆಗೆದುಕೊಳ್ಳುತ್ತದೆ, ಇದರ ಮುನ್ನೆಡೆಯಲ್ಲಿ ಹಲವಾರು ಸಮಸ್ಯೆಗಳು ಎದುರಾಗಬಹುದು;ನೀವು ಅವಕಾಶಗಳಿಗಾಗಿ ಹುಡಕಾಟ ನಡೆಸಿದ್ದೀರಾ ಎನ್ನುವುದು ಜನರ ಬಾಯಲ್ಲಿ ಬಂದಾಗ ಕ್ಷಣದಲ್ಲೇ ನಿಮಗೆ ಸಹಾಯ ಮಾಡುವ ಸ್ವಯಮಸೇವಕರು ಸಿಗುತ್ತಾರೆ, ಮತ್ತುನೀವು ನಿಯಮಿತವಾಗಿ ಸಭೆಗಳನ್ನು ನಡೆಸಬಹುದು, ಸಂಘಟನೆಯ ಕೆಲಸ ಕಡಿಮೆಯದಾಗಿರುತ್ತದೆ.

ಇದರೊಂದಿಗೆ ನೀವು ನಿಮ್ಮ ಸಿಬ್ಬಂದಿಯಲ್ಲಿ ವಿಷಯದ ಹೊರತಾಗಿಯೂ ಹಲವಾರು ಕೌಶಲ್ಯಗಳು ಮತ್ತು ಜ್ಞನವನ್ನು ಹೊಂದಿರುವವರು, ಸಂಸ್ಥೆಗಳೊಂದಿಗೆ ಸಂಪರ್ಕ ಹೊಂದಿರುವವರು, ಹವ್ಯಾಸಗಳಿರುವವರು, ಅನುಭವಗಳಿರುವವರು, ಭೌತಿಕ ಸಂಪನ್ಮೂಲಗಳನ್ನು ಹೊಂದಿರುವುದು ಮತ್ತು ಅವುಗಳ ಬಳಕೆಯ ಬಗ್ಗೆ ಆಲೋಚಿಸಲಾರಂಭಿಸುತ್ತೀರಾ. ಇದೊಂದು ಸಿಬ್ಬಂದಿಗಳು ಇತರ ವಿಷಯಗಳ ಬಗ್ಗೆ ಸಂಬಂಧಿಸಿದ ಹೆಚ್ಚುವರಿ ಸಂಪನ್ಮೂಲಗಳನ್ನು ಹೊಂದುವುದರಿಂದ ಆಗುವ ಲಾಭಗಳ ಬಗ್ಗೆ ಅರಿವು ಉಂಟು ಮಾಡಲು ದಾರಿಯಾಗುತ್ತದೆ.

ಮತ್ತು ಹೆಚ್ಚಿನ ಸಲಹೆಗಳು ಅವರಲ್ಲಿದ್ದರೆ ಅಥವಾ ಮತ್ತೇನೋ ಹೆಚ್ಚಿನದು ಕೊಡುವುದಿದ್ದರೂ ಕೂಡ. ಈ ಗೋಷ್ಠಿಯಲ್ಲಿನ ಕೇಸ್ ಸ್ಟಡಿ ಮತ್ತು ಚಟುವಟಿಕೆಗಳು ನಿಮ್ಮ ಸಿಬ್ಬಂದಿಯು ತರಗತಿಯ ನಾಲ್ಕು ಗೋಡೆಗಳನ್ನು ಹೊರಹೋಗಿ ಲಭ್ಯವಿರುವ ಸಂಪನ್ಮೂಲಗಳ ಬಗ್ಗೆ ಆಲೋಚನೆಯಲ್ಲಿ ತೊಡಗಿಕೊಳ್ಳುವಂತೆ ಮಾಡಲು ಉಪಯುಕ್ತ ಚಟುವಟಿಕೆಯಾಗುತ್ತದೆ.

# 4. ಸಂಪನ್ಮೂಲಗಳ ಬಳಕೆಯ ಬಗ್ಗೆ ಯೋಜಿಸುವುದು

ನಿಮ್ಮ ಪರೀವಿಕ್ಷಣೆ ಮುಗಿದ ಮೇಲೆ, ಸಂಪನ್ಮೂಲಗಳ ಉಪಯೋಗಕ್ಕೆ ಅತ್ಯಂತ ವ್ಯವಸ್ಥಿತವಾದ ಯೋಜನೆಯನ್ನು ರೂಪಿಸಬೇಕು, ಹಾಗಾಗಿ ನಿಮ್ಮ ಶಾಲೆಯಲ್ಲಿನ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸಂಪನ್ಮೂಲಗಳ ಉತ್ತಮ ಬಳಕೆಯ ಮೂಲಕ ಹೆಚ್ಚಿನ ಕಲಿಕೆಗೆ ಅವಕಾಶವಿರುತ್ತದೆ. ಈ ಯೋಜನೆಯು ಎಲ್ಲಾ ವರ್ಗದ ಸಂಪನ್ಮೂಲಗಳನ್ನು ಉದ್ದೇಶಿಸಿರಬೇಕು ಅಥವಾ ಪ್ರತಿವರ್ಷದ ಗುಂಪು ಒಳಗೊಂಡಿರಬೇಕು ಎಂದೇನಿಲ್ಲ. ಇದೊಂದು ನಿರ್ದಿಷ್ಟ ಯೋಜನೆಯಾಗಿದ್ದು, ಕೇಸ್ ಸ್ಟಡಿ 2ರಲ್ಲಿರುವಂತೆ ಕ್ಷೇತ್ರ ಪ್ರವಾಸದ ಪರಿಚಯ ಅಥವಾ ವಿದ್ಯಾರ್ಥಿಗಳ ಕಲಿಕೆಯಲ್ಲಿ ಅಥವಾ ಪಠ್ಯಕ್ಕೆ ಸಂಬಂಧಿಸಿದಂತೆನಿಮಗಿರುವ ನಿರ್ದಿಷ್ಟ ಕಾಳಜಿಯಗಿರಬಹುದು. ಬಹಳಷ್ಟು ಸಮಯದಿಂದ ನಿಮ್ಮನ್ನು ಯೋಚನೆ ಮಾಡುವಂತೆ ಮಾಡಿರುವ ಅಥವಾ ನಿಮ್ಮ ತಂಡದಲ್ಲಿ ನಿಮಗೆ ನಿಯೋಜಿಸಿರುವುದಾಗಿರಬಹುದು. ಕೇಸ್ ಸ್ಟಡಿ 2 ಶಾಲಾ ನಾಯಕಿ ಹೇಗೆ ತನ್ನ ಯೋಜನೆಯನ್ನು ಜಾರಿಗೊಳಿಸಿದರು ಎಂಬುದನ್ನು ತಿಳಿಸುತ್ತದೆ. ನೀವಿಗ ನಿಮ್ಮದೇ ಶಾಲೆಗೆ ಯೋಜನೆಯನ್ನು ರೂಪಿಸಲು ಆರಂಭಿಸಬಹುದು.

## ಚಟುವಟಿಕೆ 7: ನಿಮ್ಮ ಗುರಿಯ ಅಂತಿಮ ಹಂತದ ಕಲ್ಪನೆ

ಒಂದು ಉತ್ತಮ ಯೋಜನೆಯು ಮೊದಲು ನಿಮ್ಮ ಗುರಿಯ ಕೊನೆಯತ್ತ ಮೊದಲು ಗಮನಹರಿಸುತ್ತದೆ. ನೀವು ಮತ್ತು ನಿಮ್ಮ ವಿದ್ಯಾರ್ಥಿಗಳು, ಸಿಬ್ಬಂದಿಯು ಹೆಚ್ಚಾಗಿ ಲಭ್ಯವಿರುವ ಸಂಪನ್ಮೂಲಗಳು ಮತ್ತು ನಿಮ್ಮ ಪಟ್ಟಿಯಲ್ಲಿರುವ ಬಳಸದೇ ಇರುವ ಸಂಪನ್ಮೂಲಗಳಿಂದ ವಿದ್ಯಾರ್ಥಿಗಳ ಕಲಿಕೆ ಮತ್ತು ಅದರ ವಿನ್ಯಾಸದಿಂದಾಗಿ ನಿಮ್ಮ ಶಾಲೆ ಹೇಗಿರುತ್ತದೆಂದು ಕಲ್ಪಿಸಿಕೊಳ್ಳಿ. ನಿಮ್ಮ ಕಲಿಕಾ ಡೈರಿಯಲ್ಲಿ ಈ ಸನ್ನೀವೇಶವನ್ನು ವರ್ಣಿಸಿ.

ಉದಾಹರಣೆಗೆ, ನೀವು ಹೀಗೆ ಕಲ್ಪಿಸಿಕೊಳ್ಳಬಹುದು, ವಿದ್ಯಾರ್ಥಿಗಳು ತಮ್ಮ ಅಜ್ಜಿ–ತಾತಂದಿರಿಂದ ಕಥೆಗಳನ್ನು ಪಡೆದುಕೊಂಡು ಅದನ್ನು ಕ್ಲಾಸ್ ಬುಕ್ ಆಗಿ ಅಭಿವೃದ್ಧಿಪಡಿಸುವ ಮೂಲಕ ಅವರ ಭಾಷೆ ಮತ್ತು ಪರಂಪರೆಯನ್ನು ಬಳಸಿಕೊಳ್ಳುತ್ತಾರೆ.ಅಥವಾ ವಿದ್ಯಾರ್ಥಿಗಳು ಟಿನ್ ಕ್ಯಾನಗಳಿಂದ ಸಂಗೀತದ ವಾದ್ಯಗಳನ್ನು ತಯಾರಿಸಿ, ಅದರಿಂದಾಗಿ ವಿವಿಧ ಧ್ವನಿಗಳು ಹೇಗಿರುತ್ತದೆ ಎಂದು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ನಿಮ್ಮ ಉದಾಹರಣೆಗಳು ಕಲಿಕೆಯ ಫಲಿತಾಂಶಗಳನ್ನು ಕೇಂದ್ರಿಕರಿಸಿರುತ್ತವೆಯೇ ಹೊರತಯ ಲಭ್ಯವಿರುವ ಸಂಪನ್ಮೂಲವನ್ನಲ್ಲ. ಈ ಸನ್ನಿವೇಶವನ್ನು ಯಾರು ನಿಮಗೆ ಯೋಜನೆಯ ಚಟುವಟಿಕೆಗೆ ಸಹಾಯ ಮಾಡಿದರೂ ಆ ಸ್ವಯಂ ಸೇವಕರೊಂದಿಗೆ ಹಂಚಿಕೊಳ್ಳಬಹುದು.

**ಚರ್ಚೆ**

ಇದೊಂದು ವ್ಯಕ್ತಿಗತವಾದ ಸನ್ನಿವೇಶ. ನೀವು ಸಂಪೂರ್ಣವಾಗಿ ಶಾಲೆಯನ್ನಾಗಲಿ ಅಥವ ನಿರ್ದಿಷ್ಟ ವಿವವರಗಳನ್ನಾಗಲಿ ಕೇಂದ್ರಿಕರಿಸಬಹುದು. ನೀವು ನಿಮ್ಮ ಶಾಲೆಯಲ್ಲಿ 'ತಕ್ಷಣದಲ್ಲಿ ಗೆಲ್ಲುವು'ದನ್ನು ಗುರುತಿಸಿರಬಹುದು, ಶೈಕ್ಷಣಿಕ ಸಂಪನ್ಮೂಲಕ್ಕೆ ಸಂಬಂಧಿಸಿದಂತೆ ಹೊಸದೊಂದು ದೃಷ್ಟಿಕೋನವನ್ನು

ಪರಿಚಯಿಸಬಹುದು. – ಕೇಸ್ ಸ್ಟಡಿಯಲ್ಲಿ ಹೇಳಿರುವಂತೆ ಪ್ರತಿಯೊಂದು ತರಗತಿಯ ಕಲಿಕೆಯ ಅನುಭವದ ಭಾಗವಾಗಿ ಕ್ಷೇತ್ರ ಪ್ರವಾಸವನ್ನು ಏರ್ಪಡಿಸುವುದು.

ಹಿಂಬದಿಯ ಯೋಜನೆಯು (Backward Planning) ಗುರಿಯ ಅಂತಿಮ ಹಂತವನ್ನು ಆಧರಿಸಿ ರೂಪಿಸುವ ಯೋಜನೆಯಾಗಿದೆ. (ಎಲ್ಮೋರ್ 1979). ನೀವು ಗುರಿಯ ಹಿಂಬದಿಯಿಂದ ಕೆಲಸ ಮಾಡಲು ಆರಂಭಿಸಿದಾಗ, ಯೋಜನೆಯ ಭಾಗವಾಗಿರುವ ಪ್ರಮುಖರ ಕೌಶಲ್ಯಗಳು, ನಡವಳಿಕೆಗಳು ಮತ್ತು ಸ್ವಯಂ ಪ್ರೇರಣೆಗಳ ಬಗ್ಗೆ ಆಲೋಚಿಸುತ್ತೀರಾ. ಕೆಳಗೆ ನೀಡಿರುವ ಟಿಪ್ಪಣಿಯನ್ನು ಪರಿಗಣಿಸಿ, ಶಾಲೆಗೆ ಭೇಟಿನೀಡುವವರ ಕಾರ್ಯಕ್ರಮದ ಪರಿಚಯಕ್ಕೆ ಯೋಜನೆಯನ್ನು ರೂಪಿಸುವ ಮೊದಲು ಶಾಲಾ ನಾಯಕರೊಬ್ಬರ ಟಿಪ್ಪಣಿ.

ಗುರಿ: ಶಾಲೆಗೆ ಭೇಟಿ ನೀಡುವವರ ಕಾರ್ಯಕ್ರಮವನ್ನು ಜಾರಿಗೊಳಿಸುವುದು, ಕನಿಷ್ಠ ಪಕ್ಷ ಐವರು ಪ್ರತಿ ತರಗತಿಗೂ ಭೇಟಿ ನೀಡಬೇಕು (IX,X,XI ಮತ್ತು XII ತರಗತಿಗಳಿಗೆ) ಅವರನ್ನು ತಮ್ಮ ವೃತ್ತಿಗೆ ಸಂಬಂಧಿಸಿದಂತೆ ಹಾಗೂ ಪಠ್ಯಕ್ರಮಕ್ಕೆ ಸರಿಹೊಂದುವಂತೆ ಮಾತನಾಡಬೇಕು.

**ಪ್ರಮುಖರು:**

1. ಶಿಕ್ಷಕರು
2. ವಿದ್ಯಾರ್ಥಿಗಳು
3. ಪೋಷಕರು ಅಥವಾ ಪಾಲಕರು
4. ಕಛೇರಿ ಸಿಬ್ಬಂದಿ
5. ಸಹ ಸಿಬ್ಬಂದಿಗ



ಶಿಕ್ಷಕರ ಪಾತ್ರ:

- ಪಠ್ಯಕ್ರಮಕ್ಕೆ ಸರಿಹೊಂದುವಂತಹ ವೃತ್ತಿಗಳನ್ನು ಗುರುತಿಸಿ
- ಪಠ್ಯಕ್ರಮದಲ್ಲಿ ಏನೆಲ್ಲಾ ಇರುತ್ತದೆ ಮತ್ತು ವಿದ್ಯಾರ್ಥಿಗಳೊಂದಿಗೆ ಅವರು ಏನನ್ನು ಚರ್ಚಿಸಬಹುದು ಎಂದು ಭೇಟಿ ಕೊಡುವವರೊಂದಿಗೆ ಚರ್ಚಿಸಿ.
- ಇನ್ನೂ ಹೆಚ್ಚಿನದನ್ನು ತಿಳಿದುಕೊಳ್ಳಬೇಕು ಎಂಬುದರ ಬಗ್ಗೆ ವಿದ್ಯಾರ್ಥಿಗಳನ್ನು ತಯಾರು ಮಾಡಿ
- ಭೇಟಿ ಕೊಡುವವರನ್ನು ಅವರ ಕೌಶಲ್ಯಕ್ಕೆ ಸರಿಯಾದ ರೀತಿಯಲ್ಲಿ ಧನ್ಯವಾದಗಳನ್ನು ಸಲ್ಲಿಸುವಂತೆ ಸಿದ್ಧಪಡಿಸಿ.
- ಭೇಟಿ ನೀಡಿರುವವರಿಂದ ಕಲಿತುಕೊಂಡಿದ್ದನ್ನು ಅಳವಡಿಸಿಕೊಳ್ಳಲು ಅವಕಾಶ ಮಾಡಿಕೊಡಿ.



ವಿದ್ಯಾರ್ಥಿಗಳ ಪಾತ್ರ:

- ಭೇಟಿಗಾಗಿ ತಮಗೆ ಪರಿಚಯವಿರುವ ಸೂಕ್ತವಾದ ವ್ಯಕ್ತಿಗಳನ್ನು ಗುರುತಿಸಲು ಸಹಾಯ
- ಅವರಿಗೆ ಈಗಾಗಲೆ ಏನು ತಿಳಿದಿದೆ ಮತ್ತು ಏನ್ನನ್ನು ತಿಳಿಯಲು ಬಯಸುತ್ತಾರೆ ಎನ್ನುವುದನ್ನು ಗುರುತಿಸಿ
- ಭೇಟಿ ಮಾಡುವವರ ಆತಿಥ್ಯವನ್ನು ನೋಡಿಕೊಳ್ಳಿ

- ಭೇಟಿ ನೀಡಿದ್ದವರಿಂದ ಕಲಿತ ಮಾಹಿತಿಯನ್ನು ಅಳವಡಿಸಿಕೊಳ್ಳಿ ಮತ್ತು ಅದರ ಬಗ್ಗೆ ಅವರ ಸಹವರ್ತಿಗಳೊಂದಿಗೆ ಮತ್ತು ಶಿಕ್ಷಕರೊಂದಿಗೆ ಚರ್ಚಿಸಿ

ಎಲ್ಲಾ ಸಿಬ್ಬಂದಿಗಳನ್ನೂ ಒಳಗೊಂಡಂತೆ ಸಂಪನ್ಮೂಲಗಳ ಬಳಕೆಗೆ ಸಂಪೂರ್ಣ–ಶಾಲಾ ದೃಷ್ಟಿಕೋನವನ್ನು ಅಳವಡಿಸಿಕೊಳ್ಳುವುದು ಮುಖ್ಯ. ಕೇವಲ ಸಂಪನ್ಮೂಲಗಳ ಬಳಕೆಗೆ ಮಾತ್ರವಲ್ಲ ಅದರ ನಿರ್ವಹಣೆ ಮತ್ತು ನೋಡಿಕೊಳ್ಳುವಲ್ಲಿ ಕೂಡ ಮುಖ್ಯವಾಗುತ್ತದೆ, ಈ ಸನ್ನಿವೇಶದಲ್ಲಿ ಭೇಟಿ ಮಾಡುವವರು ಶಾಲೆಗೆ ಬಂದಾಗ ಎಲ್ಲಾ ಸಿಬ್ಬಂದಿಗೂ ಅವರನ್ನೇ ಏಕೆ ಕರೆಸುತ್ತಿದ್ದೇವೆ ಎನ್ನುವುದು ತಿಳಿದಿರಬೇಕು, ಅವರನ್ನು ಸೂಕ್ತವಾದ ರೀತಿಯಲ್ಲಿ ಸ್ವಾಗತಿಸಬೇಕು, ಅವರಿಗೆ ಶಾಲೆಯ ಬಗ್ಗೆ ಒಳ್ಳೆಯ ಅಭಿಪ್ರಾಯ ಬರಬೇಕು. ಭೇಟಿ ನೀಡುವರು ಅಮೂಲ್ಯವಾದ ಸಂಪನ್ಮೂಲವಾಗಿದ್ದು, ಅವರನ್ನು ಭೌತಿಕ ಸಂಪನ್ಮೂಲವೆಂದೆ ಸಾಧ್ಯವಾದಷ್ಟು ಪರಿಗಣಿಸಬೇಕು. ಕೇಸ್ ಸ್ಟಡಿ 3 ಮತ್ತೊಂದು ಸಂಪನ್ಮೂಲ, ಪುಸ್ತಕಗಳು ಇದರ ಗರಿಷ್ಠ ಮಟ್ಟದ ಉಪಯೋಗ ಮತ್ತು ಹೆಚ್ಚಿನವರಿಗೆ ತಲುಪಿಸುವುದು ಹೇಗೆ ಎಂಬುದರ ಬಗ್ಗೆ ತಿಳಿಸುತ್ತದೆ.

## ಕೇಸ್ ಸ್ಟಡಿ 3:

ಶಾಲೆ ಸುಮಾರು 100 ಪುಸ್ತಕಗಳನ್ನು ದೇಣಿಯಾಗಿ ಪಡೆದುಕೊಂಡಿತು. ಈ ಪುಸ್ತಕಗಳು ಹಾಗೇಯೆ ರಟ್ಟಿನ ಪೆಟ್ಟಿಗೆಗಳಲ್ಲಿ ಒಂದು ತಿಂಗಳವರೆಗೆ ಕಛೇರಿಯಲ್ಲಿ ಉಳಿದುಬಿಟ್ಟಿದ್ದವು. ಶಾಲಾನಾಯಕರು ಈ ಸಂಪನ್ಮೂಲವನ್ನು ಹೇಗೆ ಬಳಸಿಕೊಳ್ಳಬಹುದು ಎಂಬುದರ ಬಗ್ಗೆ ಆಲೋಚನೆಗಳನ್ನು ಹಂಚಿಕೊಳ್ಳಲು ಸಿಬ್ಬಂದಿಗಳ ವಿಶೇಷ ಸಭೆಯನ್ನು ಕರೆದರು. ಅವರಿಗೆ ಪುಸ್ತಕಗಳು ಲಭ್ಯವಿದ್ದೂ ಕೂಡ ಓದಲು ಆಗಿರಲಿಲ್ಲವಾಗಿದ್ದೂ ನಾಚಿಕೆಯ ವಿಷಯವಾಗಿತ್ತು. ಪ್ರತಿ ತರಗತಿಗೆ 25 ಪುಸ್ತಕಗಳನ್ನು ಹಂಚಲು ಸೂಚಿಸಿದರು. ಒಂದು ವರ್ಷದಲ್ಲಿ ಎಲ್ಲಾ ವಿದ್ಯಾರ್ಥಿಗಳು ಬೇರೆ ಬೇರೆ ಪುಸ್ತಕಗಳನ್ನು ಓದಬಹುದು. ಶಿಕ್ಷಕರು ಇದೊಂದು ಉತ್ತಮ ಆಲೋಚನೆ ಎಂದು ಒಪ್ಪಿಕೊಂಡರಾದರೂ, ಇದನ್ನು ಜಾರಿಗೊಳಿಸಲು ಆಸಕ್ತಿಯನ್ನು ತೋರಿಸಲಿಲ್ಲ. ಶಾಲಾನಾಯಕರು ಇದನ್ನು ವಿದ್ಯಾರ್ಥಿಗಳು ಓದುವುದರಿಂದ ಆಗುವ ಅನುಕೂಲತೆಗಳಿಗಿಂತ ಹೆಚ್ಚಾಗಿ ಅವರಿಗೆ ಯೋಚನೆಯಾಗಿದ್ದು ಈ ಪುಸ್ತಕಗಳು ಹಾಳಾದರೆ ತಮ್ಮನ್ನು ಹೊಣೆಗಾರರನ್ನಾಗಿಸುತ್ತಾರೆ ಎನ್ನುವ ಭಾವನೆ. ಅವರು ನಂತರದಲ್ಲಿ ವಿದ್ಯಾರ್ಥಿಗಳ ಅಸೆಂಬ್ಲಿಯಲ್ಲಿ ಪ್ರಸ್ತಾಪಿಸಿ ಇದರ ಜಾರಿಗಾಗಿ ಒಂದು ಉತ್ತಮ ವ್ಯವಸ್ಥೆಯ ಆಲೋಚನೆಯೊಂದಿಗೆ ಬರಲು ಹೇಳಿದರು.

ನಂತರದ ವಾರದಲ್ಲಿ ಶಾಲಾ ನಾಯಕರು ನೋಟಿಸ್‍ನ್ನು ಹಾಕಿದರು. ಶಾಲಾ ನಾಯಕರು ಶಾಲೆಯ ವಿದ್ಯಾರ್ಥಿಯು ಯಾವುದೇ ಪುಸ್ತಕವನ್ನು ಆಯ್ಕೆ ಮಾಡಿಕೊಂಡು ಪರಿಹಾರವನ್ನು ಸೂಚಿಸಲು ಹೇಳಿದರು. ಇದು ಪರಿಣಾಮವನ್ನು ತರುವಂತೆ ಕಂಡುಬಂತು. ಬಾಲಕಿಯರ ಗುಂಪೊಂದು ತಮ್ಮ ಯೋಜನೆಯೊಂದಿಗೆ ಶಾಲಾ ನಾಯಕರನ್ನು ಭೇಟಿ ಮಾಡಿದರು. ಅವರು ಆ ಯೋಜನೆಯ ಬಗ್ಗೆ ಅವರೊಂದಿಗೆ ಕೆಲಸ ಮಾಡಿದರು ಮತ್ತು ಸಿಬ್ಬಂದಿಗಳೊಂದಿಗೆ ಹಂಚಿಕೊಂಡರು. ಇಬ್ಬರು ಸಿಬ್ಬಂದಿಗಳು ಬಾಲಕಿಯರಿಗೆ ಸಹಾಯ ಮಾಡಲು ಮುಂದಾದರು, ಸ್ಥಳೀಯ ಮುದ್ರಕರೊಂದಿಗೆ ಮಾತನಾಡಿದರು ಮತ್ತು ಸಣ್ಣ ಸ್ಟಿಕರ್ ಲೇಬಲ್‍ಗಳನ್ನು ತಯಾರಿಸಿ ಶಾಲೆಯ ಕಛೇರಿಗೆ ತಲುಪಿಸಿದರು. ಬಾಲಕಿಯರು ಸಿಬ್ಬಂದಿಯಜೊತಗೂಡಿ ಕೆಲಸ ಮಾಡಿದರು ಮತ್ತು ತಕ್ಷಣವೇ ನಾಲ್ಕು ನೋಟ್‍ಬುಕ್‍ಗಳಲ್ಲಿ ಕ್ಯಾಟಲಾಗ್ ಸಿದ್ಧವಾಯಿತು.

ಶಾಲಾ ನಾಯಕರು ಈ ವ್ಯವಸ್ಥೆಯನ್ನು ಅಸೆಂಬ್ಲಿಯಲ್ಲಿ ಪ್ರಕಟಿಸಿದರು ಮತ್ತು ಪರಿಹಾರವನ್ನು ರೂಪಿಸಿದ ವಿದ್ಯಾರ್ಥಿಗಳನ್ನು ಹೊಗಳಿದರು. ಅವರೇ ಆಯ್ದುಕೊಂಡ ಪುಸ್ತಕಗಳನ್ನು ಅವರಿಗೆ ಬಹುಮಾನವಾಗಿ ನೀಡಿದರು. ಈ ಬಾಲಕಿಯರು ತುಂಬಾ ಸರಳವಾಗಿ ಕೆಲಸ ಮಾಡಿದ್ದಾರೆ ಎಂದು ಹೇಳಿದರು. ಮೊದಲ 24 ಆಸಕ್ತ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಸಿಗುತ್ತವೆ, ಒಂದು ತಿಂಗಳ ನಂತರ ವಿದ್ಯಾರ್ಥಿಗಳು ಪುಸ್ತಕವನ್ನು, ಆ ಪುಸ್ತಕದಲ್ಲಿ ಇಷ್ಟವಾದ ವಿಷಯಗಳ ಬಗ್ಗೆ ಸಂಕ್ಷಿಪ್ತ ವಿವರಣೆಯೊಂದಿಗೆ ಹಿಂದಿರುಗಿಸಬೇಕು, ಆದರೆ ಪುಸ್ತಕದಲ್ಲಿರುವುದನ್ನೇ ನಕಲು ಮಾಡಬಾರದು. ಪ್ರತಿ ತಿಂಗಳು, ಕೆಲವೊಮ್ಮೆ ವಿದ್ಯಾರ್ಥಿಗಳಿಗೆ ತಾವು ಓದಿದ ಪುಸ್ತಕದ ಬಗ್ಗೆ ಮಾತನಾಡಲು ಹೇಳಬಹುದು.ನಂತರದಲ್ಲಿ ಶಿಕ್ಷಕರು ಉಳಿದ 24 ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಕೊಡುತ್ತಾರೆ, ಆ ಪುಸ್ತಕವನ್ನು ಕೊಟ್ಟ ದಿನಾಂಕ ಮತ್ತು ಪುಸ್ತಕದ ಹೆಸರನ್ನು ನೋಟ್‍ಬುಕ್‍ಗಳಲ್ಲಿ ಬರೆಯುತ್ತಾರೆ.

ವಿದ್ಯಾರ್ಥಿಯೊಬ್ಬ ಸಂಕೋಚದಿಂದಲೇ ಕೈಯೆತ್ತಿ ಕೇಳಿದ ಪುಸ್ತಕವೇನಾದರೂ ಕಳೆದುಹೋದರೆ ಅಥವಾ ಹಿಂದಿರುಗಿಸಲು ವಿಫಲವಾದರೆ ಪರಿಣಾಮವೇನಾಗುತ್ತದೆ. ಇದರ ಬಗ್ಗೆ ಸಿಬ್ಬಂದಿಯೊಂದಿಗೆ ಚರ್ಚಿಸಲಾಗಿದೆ ಮತ್ತು ದೊಡ್ಡ ಶಾಲೆಯಲ್ಲಿನ ಗ್ರಂಥಪಾಲಕರೊಂದಿಗೆ ಮಾತನಾಡಲಾಗಿದೆ. ಹಲವಾರು ಗ್ರಂಥಾಲಯಗಳಲ್ಲಿ ಕಂಡುಕೊಂಡಿರುವ ಪರಿಹಾರಗಳಿಗನುಗುಣವಾಗಿ ವಿದ್ಯಾರ್ಥಿಯು ಪುಸ್ತಕದ ಮತ್ತೊಂದು ಪ್ರತಿಯನ್ನು ನೀಡಬೇಕು ಇಲ್ಲವೆ ಅದನ್ನು ಸರಿಪಡಿಸಲು ತಗಲುವ ವೆಚ್ಚವನ್ನು ಭರಿಸಬೇಕು. ಮತ್ತು ತಡವಾಗಿ ಹಿಂದಿರುಗಿಸಿದರೆ ಲೇಟ್ ಫೀಯನ್ನು ನೀಡಬೇಕು ಎಂದು ಶಾಲಾ ನಾಯಕರು ವಿವರಿಸಿದರು. ವಿದ್ಯಾರ್ಥಿಗಳನ್ನು ಇದನ್ನು ಒಪ್ಪಿಕೊಂಡರು ಮತ್ತು ವ್ಯವಸ್ಥೆಯು ಜಾರಿಯಾಯಿತು.

ಎರಡು ವರ್ಷಗಳ ನಂತರ ಹೆಡ್ ಮಾಸ್ಟರ್ ಮತ್ತಷ್ಟು ಪುಸ್ತಕಗಳನ್ನು ದೇಣಿಯಾಗಿ ಪಡೆದುಕೊಂಡರು. ಓದುವುದು ಎಲ್ಲರಿಗೂ ಅಭ್ಯಾಸವಾಯಿತು; ಮತ್ತು ಆರು ತಿಂಗಳಿಗೊಮ್ಮೆ ಅಂತರ ತರಗತಿಯ ಗ್ರಂಥಾಲಯಗಳ ನಡುವೆ ಪುಸ್ತಕಗಳ ವಿನಿಮಯವೂ ಆಯಿತು

## ಚಟುವಟಿಕೆ 8: ಸಂಪನ್ಮೂಲಗಳ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಬಗ್ಗೆ

ಈ ಕೇಸ್ ಸ್ಟಡಿಯು ಎಲ್ಲಾ ವಿದ್ಯಾರ್ಥಿಗಳು ತಮ್ಮ ಕಲಿಕೆಗೆ ಪೂರಕವಾಗಿ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದನ್ನು ಖಾತರಿಪಡಿಸಿಕೊಳ್ಳಲು ವ್ಯವಸ್ಥೆಯನ್ನು ಕಲ್ಪಿಸುವ ಅಗತ್ಯತೆಯ ಬಗ್ಗೆ ವಿವರಿಸುತ್ತದೆ. ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ನೀವೆನನ್ನು

ಕಲಿಯಬಹುದು ಎಂಬುದರ ಬಗ್ಗೆ ಆಲೋಚಿಸಿ:

- ವ್ಯವಸ್ಥೆಯನ್ನು ಯಶಸ್ವಿಯಾಗಿ ಪರಿಚಯಿಸಲು ಶಾಲಾ ನಾಯಕರಿಗೆ ಯಾವ ನಾಯಕತ್ವದ ಗುಣಗಳು ಸಮರ್ಥರನ್ನಾಗಿಸುತು?
- ಈ ಸನ್ನಿವೇಶದಲ್ಲಿ ನೀವು ಶಾಲಾ ನಾಯಕರಾಗಿದ್ದಲ್ಲಿ, ಈ ಸಂಪನ್ಮೂಲಗಳ ಬಳಕೆಗೆ ಯಾವ ವಾದವನ್ನು ಮಂಡಿಸಿ ಶಿಕ್ಷಕರ ಮನವೊಲಿಸುತ್ತಿದ್ದಿರಿ ಮತ್ತು ಹೇಗೆ ವ್ಯವಸ್ಥೆಯನ್ನು ಪರಿಚಯಿಸುತ್ತಿದ್ದಿರಿ?
- ನಿಮ್ಮದೇ ಹಿನ್ನೆಲೆಯಲ್ಲಿ ಪುಸ್ತಕಗಳನ್ನು ಹಂಚಲು ಮತ್ತು ಕಲಿಕೆಯಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ವ್ಯವಸ್ಥೆಯನ್ನು ಕಲ್ಪಿಸಲು ಯಾವ ಸಂಪನ್ಮೂಲಗಳು ಬೇಕು? ಈ ವ್ಯವಸ್ಥೆಯು ಪ್ರಸ್ತುತ ಕೆಲಸ ಮಾಡುತ್ತದೆಯೇ? ಈ ವ್ಯವಸ್ಥೆಯನ್ನು ಉತ್ತಮಪಡಿಸಲು ನೀವೇನು ಮಾಡಬಹುದು?

**ಚರ್ಚೆ:**

ಕೇಸ್ ಸ್ಟಡಿ 3ರಲ್ಲಿ ಹೇಳಿರುವಂತೆ ಪುಸ್ತಕಗಳು ಶಾಲೆಯಲ್ಲಿ ಅತಿ ಹೆಚ್ಚು ಬಳಕೆಯಾಗದ ಸಂಪನ್ಮೂಲ ಮತ್ತು ಇಲ್ಲಿ ಯಾರಾದರು ಒಬ್ಬರು ಮುಂದಾಳತ್ವವನ್ನು ವಹಿಸಿಕೊಂಡು ಪುಸ್ತಕಗಳನ್ನು ಹೆಚ್ಚು ವ್ಯಾಪಕವಾಗಿ ಬಳಸುವಂತೆ ಮಾಡುವವರೊಬ್ಬರ ಅಗತ್ಯತೆಯಿತ್ತು. ಇದೊಂದು ಸಂಪನ್ಮೂಲಗಳನ್ನು ಸಹಯೋಗದೊಂದಿಗೆ ಸಂಪನ್ಮೂಲಗಳ ಸುತ್ತ ಅದರ ನಿರ್ವಹಣೆಗೆ ಯೋಜನೆಯನ್ನು ರೂಪಿಸಲು ಒಂದು ಉತ್ತಮ ಉದಾಹರಣೆ. ವಿದ್ಯಾರ್ಥಿಗಳು ಸಮಸ್ಯೆಯನ್ನು ಬಗೆಹರಿಸುವಲ್ಲಿ ಹೇಗೆ ತೊಡಗಿಕೊಂಡರು ಎಂಬುದನ್ನು ನೀವು ಗಮನಿಸಿದ್ದೀರಾ? ನಿಮ್ಮೊಂದಿಗ ನಿಮ್ಮ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಸಮಸ್ಯೆಗೆ ಪರಿಹಾರ ನೀಡುವವರನ್ನಾಗಿ ಮಾಡುವುದು ಕೂಡ ಒಂದು ಕೌಶಲ್ಯ. (ಕೇವಲ ಸಮಸ್ಯೆಯನ್ನು ಗುರುತಿಸುವುದಕ್ಕಿಂತ ಹೆಚ್ಚಾಗಿ) . ಸೃಜನಶೀಲತೆ ಮತ್ತು ಸಂಘಟಿಸುವಿಕೆಯಿಂದ ನೀವು ಮತ್ತು ನಿಮ್ಮ ಸಿಬ್ಬಂದಿಯು ವಿದ್ಯಾರ್ಥಿಗಳಲ್ಲಿ ಕಲಿಕೆಯ ಫಲಿತಾಂಶಗಳನ್ನು ಉತ್ತಮಪಡಿಸಲು ಇನ್ನೂ ಹೆಚ್ಚಿನ ಸಂಪನ್ಮೂಲಗಳನ್ನು ಪಡೆದುಕೊಳ್ಳಬಹುದು.

ಈ ಸನ್ನಿವೇಶದಲ್ಲಿ ಶಾಲಾ ನಾಯಕರು ಗ್ರಂಥಾಲಯದ ವ್ಯವಸ್ಥೆಯನ್ನು ಮಾಡಿದ್ದು ಶಾಲೆಗೆ ದೇಣಿಗೆ ಕೊಡುವವರನ್ನು ಹೆಚ್ಚಿನ ಪುಸ್ತಕಗಳನ್ನು ದೇಣಿಗೆಯಾಗಿ ನೀಡಲು ಉತ್ತೇಜಿಸುತ್ತದೆ, ಹಾಗೂ ಸಂಪನ್ಮೂಲಗಳನ್ನು ಉತ್ತಮವಾಗಿ ಬಳಸಿಕೊಳ್ಳಲಾಯಿತು ಮತ್ತು ವಿದ್ಯಾರ್ಥಿಗಳಿಗೂ ಕೂಡ ಅನುಕೂಲವಾಯಿತು. ವಿದ್ಯಾರ್ಥಿಗಳಿಗೆ ಚರ್ಚಿಸಲು ಪ್ರತಿ ತಿಂಗಳು ಸಮಯವನ್ನು ನಿಗದಿ ಮಾಡಿದ್ದು ಮುಖ್ಯವಾದ ಅಂಶ, ಏಕೆಂದರೆ ಇದನ್ನು ಪಠ್ಯ ಚಟುವಟಿಕೆಯ ಭಾಗವನ್ನಾಗಿಸಿ ಮತ್ತು ಚರ್ಚೆಯ ಮೂಲಕ ಅನುಭವಗಳನ್ನು ಹಂಚಿಕೊಳ್ಳುವುದು, ಇವುಗಳು ಪುಸ್ತಕಗಳನ್ನು ಕೊಟ್ಟು ಹಿಂತಿರುಗಿಸುವುದಕ್ಕಿಂತಲೂ ಕಲಿಕೆಯ ಮೇಲೆ ಹೆಚ್ಚಿನ ಪರಿಣಾಮವನ್ನು ಬೀರುತ್ತದೆ.

# 5. ಧನ ಸಹಾಯವೂ ಬೇಕಾಗುವ ಸಂಪನ್ಮೂಲಗಳು

ಈ ಘಟಕದಲ್ಲಿ ನೀವು ನೋಡಿರುವುದು ಈಗಾಗಲೇ ಶಾಲೆಯಲ್ಲಿರುವ ಅಥವಾ ಸುತ್ತಮುತ್ತಲಿನಲ್ಲಿ ಅಥವಾ ಸಮುದಾಯದಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು. ಅದೇನೆ ಇರಲಿ ಕೆಲವೊಮ್ಮೆ ಸಾರಿಗೆ, ಶುಲ್ಕಗಳು, ಉಪಕರಣಗಳು,ವಸ್ತುಗಳು ಅಥವಾ ಸಾಧನಗಳಿಗೆ ಹಣದ ಅವಶ್ಯಕತೆಯಿದೆ. ಇದು ಇರುವ ಸಂಪನ್ಮೂಲಗಳ ನಿರ್ವಹಣೆಗೆ ಅಥವಾ ಹೊಸದನ್ನು ಕೊಳ್ಳಲು ಬೇಕಾಗಬಹುದು.

ಎಲ್ಲಿ ಸಮುದಾಯವು ಬಡತನದಲ್ಲಿರುತ್ತದೋ ಅಲ್ಲಿ ಶಾಲಾ ನಾಯಕರಿಗೆ ಇದೊಂದು ಸವಾಲೇ ಸರಿ. ಸಂಪತ್ತಿರುವ ಪೋಷಕರು, ದಾನಿಗಳು ಅಥವಾ ಫಲಾನುಭವಿಗಳು ಸಂಪನ್ಮೂಲಗಳಿಗಾಗಿ ಹಣವನ್ನು ಹೊಂದಿಸಲು ಆಯ್ಕೆಗೆ ಅವಕಾಶವಿರುತ್ತದೆ; ಕೆಲವು ಶಾಲಾ ನಾಯಕರಿಗೆ ಮತ್ತು ಶಾಲಾ ನಿರ್ವಹಣಾ ಸಮಿತಿಯು ಧನ ಸಹಾಯಕ್ಕಾಗಿ ಹುಡುಕಾಟ ಮಾತ್ರವಲ್ಲ ಅವುಗಳ ಗರಿಷ್ಠ ಮಟ್ಟದ ಬಳಕೆಗೂ ಶ್ರಮವಹಿಸಬೇಕಗುತ್ತದೆ. ಧನ ಸಹಾಯವು ಕೆಲವೊಂದು ನಿರ್ದಿಷ್ಟ ಪ್ರಾಜೆಕ್ಟ್‌ಗಳಿಗೆ ಕೊಡಲಾಗುತ್ತದೆ.( ಗ್ರಂಥಾಲಯ, ಹೋದೋಟಗಳ ಸಲಕರಣೆಗಳು, ಕಪ್ಪು ಹಲಗೆಯ ಬಣ್ಣ ಮೊದಲಾದವುಗಳಿಗೆ), ಇವುಗಳನ್ನು ನಿರಂತರವಾಗಿ ಕೊಡಲು ಸಾಧ್ಯವಾಗುವುದು ವಿದ್ಯಾರ್ಥಿಗಳ ಕಲಿಕೆಗೆ ಪರಿಣಾಮಕಾರಿಯಾಗಿ ಸಹಾಯವಾಗುತ್ತದೆ ಮತ್ತು ಉತ್ತಮವಾಗಿಬಳಸಿಕೊಂಡಲ್ಲಿ ಮಾತ್ರ. ಶಾಲೆಯ ಸಂಪನ್ಮೂಲಗಳಿಗೆ ಬಂಡವಾಳವನ್ನು ನೀಡಲು ಶಾಲಾ ನಾಯಕರು ಮನವೊಲಿಸುವ ತಂತ್ರವನ್ನು ಬಳಸಬೇಕಾಗುತ್ತದೆ ಮತ್ತು ಮುಂದೆಕೂಡ ಬಂಡವಾಳವನ್ನು ನೀಡಲು ಪ್ರೇರೇಪಿಸಲು ಅನುಸರಣೆಯಾಗಿ ಮೌಲ್ಯಮಾಪನ ವರದಿಗಳನ್ನು ಸಲ್ಲಿಸಬೇಕಾಗುತ್ತದೆ. ನಿಮ್ಮ ಸಂಪನ್ಮೂಲಗಳ ಗುರಿ ಮತ್ತು ಯೋಜನೆಯನ್ನು ಧನ ಸಹಾಯ ಮಾಡಲು ಸಾಧ್ಯತೆಯಿರುವ ದಾನಿಗಳನ್ನು ಉತ್ತೇಜಿಸಲು ಸಲ್ಲಿಸಲು ಸಹಾಯವಾಗಬಹುದು. ನೀವು ಬಜೆಟ್‌ನ್ನು ಕೂಡ ಸಲ್ಲಿಸಬಹುದು. ಒಬ್ಬರೇ ಒಬ್ಬ ದಾನಿಗಳಲ್ಲದೆ ಹಲವಾರು ವ್ಯಕ್ತಿಗಳು ಭಾರೀ ಸಂಪನ್ಮೂಲಗಳಿಗೆ ಧನಸಹಾಯ ಮಾಡಲು ಸಿದ್ಧರಿರಬಹುದು; ಉದಾಹರಣೆಗೆ ಒಬ್ಬ ಒಬ್ಬರು ಒಂದಕ್ಕೆ ಹಣ ನೀಡಲು ಮುಂದೆ ಬರಬಹುದು; ಹೂದೋಟದ ಒಂದು ಸಲಕರಣೆಗೆ ಒಬ್ಬರು ಮತ್ತೊಬ್ಬರು ಬೀಜಗಳಿಗೆ ಸಹಾಯ ಮಾಡಬಹುದು.

ನೀವು ಪೋಷಕರನ್ನು ಸಂಪನ್ಮೂಲಗಳಿಗೆ ದತ್ತಿಗಾಗಿ ಕೇಳಿದರೆ ಅವರ ಕೊಡುಗೆಯು ಅವರ ಆದಾಯದ ಮಟ್ಟವನ್ನು ಆಧರಿಸಿರುತ್ತದೆ. ಮತ್ತು ಅವರು ಮಾಡುವ ವೆಚ್ಚವನ್ನು ಪರಿಗಣಿಸಿ. ಕೆಲವು ವಿದ್ಯಾರ್ಥಿಗಳು ಅವರ ಪೋಷಕರ ಕೊಡುಗೆಯ ಮೇಲೆ ಅವಲಂಬಿತರಾಗಿರುವುದರಿಂದ ಆವಿದ್ಯಾರ್ಥಿಗಳನ್ನು ಹೊರಗಿಡುವುದು ಒಳ್ಳೆಯದು. (ಶಾಲಾ ಕ್ಷೇತ್ರ ಪ್ರವಾಸ) ಮತ್ತು ಅವರಿಗೆ ಸಬ್ಸಿಡಿ ನೀಡುವುದು ಅಥವಾ ಪಾತಿಸುವ ಯೋಜನೆಯನ್ನು ಪರಿಗಣಿಸುವುದು ಒಳ್ಳೆಯದು. ಏಕೆಂದರೆ ವಿದ್ಯಾರ್ಥಿಗಳಿಗೆ ಕಲಿಕೆಗೆ ಸಮಾನವಾದ ಅವಕಾಶಗಳನ್ನು ನೀಡಬೇಕು.

# 6. ಸಾರಾಂಶ

ಶಾಲೆಯಲ್ಲಿ ಹಲವಾರು ಹಂತದಲ್ಲಿ ಹಲವು ವಿಧದ ಸಂಪನ್ಮೂಲಗಳು ಲಭ್ಯವಿವೆ, ಆದರೆ ಶಾಲಾ ನಾಯಕರಾಗಿರುವ ನೀವು ನಿಮ್ಮಲ್ಲಿರುವನಿಯಮಿತವಾದ ಸಂಪನ್ಮೂಲಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಲು ಕ್ರಮ ಕೈಗೊಳ್ಳುವುದು ಮಾತ್ರವಲ್ಲ ಲಭ್ಯವಿರುವ ಸಂಪನ್ಮೂಲಗಳನ್ನು ಕಲಿಕಾ ಸಾಧನಗಳನ್ನಾಗಿ ಬದಲಾಯಿಸಿಕೊಳ್ಳಬೇಕು. ಪ್ರಸ್ತುತ ಇರುವ ಮತ್ತು ಸಂಪನ್ಮೂಲಗಳಾಗಬಹುದಾದವುಗಳ ಬಗ್ಗೆ ವಿಮರ್ಶಿಸುವುದು ಒಂದು ಉತ್ತಮ ಆರಂಭವಾಗಬಹುದು ಆದರೆ ನೀವು ಗುರುತಿಸಿರುವ ಸಂಪನ್ಮೂಲಗಳು ಎಷ್ಟರಮಟ್ಟಿಗೆ ಎಲ್ಲಾ ವಿದ್ಯಾರ್ಥಿಗಳೂ ಸಮಾನವಾಗಿ ಅವಗಳನ್ನು ಪಡೆದುಕೊಳ್ಳಬಹುದು ಎನ್ನುವುದರ ಬಗ್ಗೆ ಜಾಗೂರಕರಾಗಿರಬೇಕು. ಸಂನ್ಮೂಲಗಳ ಬಳಕೆಯು ಕಲಿಕೆಯ ಫಲಿತಾಂಶಗಳೊಂದಿಗೆ ನೇರವಾದ ಸಂಪರ್ಕವನ್ನು ಹೊಂದಿರುತ್ತವೆ. ನೀವು ವಿದ್ಯಾರ್ಥಿಗಳು,ಸಿಬ್ಬಂದಿ ಮತ್ತು ಇನ್ನಿತರ ಪ್ರಮುಖರನ್ನು ಹೇಗೆ ಪ್ರೇರೇಪಿಸಬೇಕೆಂದು ಯೋಚಿಸಲು ಆರಂಭಿಸಿರುತ್ತೀರಾ. ಈ ಘಟಕದಲ್ಲಿ ನೀವು ನಿಮ್ಮ ಶಾಲೆಗಾಗಿ ನೀವು ನಿರ್ಧರಸಿರುವ ಗುರಿಯ ಬಗ್ಗೆ ಸಹಯೋಗದೊಂದಿಗೆ ಕೆಲಸ ಮಾಡಬಹುದು. ಆದ್ದರಿಂದ ಈ ಆಲೋಚನೆಗಳು ಮತ್ತು ಸಾಧನಗಳೊಂದಿಗೆ ನಿಮ್ಮ ಶಾಲೆಯನ್ನು ಸಂಪನ್ಮೂಲಗಳಿಂದ ಶ್ರೀಮಂತವಾದ ಕಲಿಕೆಯ ವಾತಾವರಣವಿರುವ ಶಾಲೆಯನ್ನಾಗಿಸಿ, ಶಾಲೆಯಲ್ಲಿ ಸಂದರ್ಭಗಳನ್ನು ಮತ್ತು ವಾಸ್ತವಿಕತೆಗಳನ್ನು ಉತ್ತಮ ರೀತಿಯಲ್ಲಿ ಬಳಸಿಕೊಳ್ಳಿ.

ಈ ಘಟಕವು ಒಂದು ಗಣ ಅಥವಾ ಕುಟುಂಬಗಳ ಘಟಕವಾಗಿದ್ದು ಕೆಲವೊಂದು ಪ್ರಮುಖ ಕ್ಷೇತ್ರಗಳನ್ನು ಬೋಧನೆ ಮತ್ತು ಕಲಿಕೆಯನ್ನು ವರ್ಗಾಯಿಸುವ ಪ್ರಕ್ರಿಯೆಯಾಗಿರುತ್ತದೆ.( ನ್ಯಾಷನಲ್ ಕಾಲೇಜ್ ಆಫ್ ಸ್ಕೂಲ್ ಲೀಡರ್‌ಶಿಪ್ ನೊಂದಿಗೆ ಹೊಂದಿಸಲಾಗಿದೆ) ನಿಮ್ಮ ಜ್ಞನ ಮತ್ತು ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಈ ಮುಂದಿನ ಘಟಕಗಳನ್ನು ಉಪಯುಕ್ತವಾಗಬಹುದು:

- ಪ್ರಾಥಮಿಕ ಶಾಲೆಯಲ್ಲಿ ಬೋಧನೆ ಮತ್ತು ಕಲಿಕೆಯನ್ನು ಉತ್ತಮಪಡಿಸುವಿಕೆಯು ಮಂಚೂಣಿಯಲ್ಲಿರುವುದು
- ಮಾಧ್ಯಮಿಕ ಶಾಲೆಯಲ್ಲಿ ಬೋಧನೆ ಮತ್ತು ಕಲಿಕೆಯನ್ನು ಉತ್ತಮಪಡಿಸುವಿಕೆಯು ಮಂಚೂಣಿಯಲ್ಲಿರುವುದು
- ನಿಮ್ಮ ಶಾಲೆಯಲ್ಲಿ ಅಂದಾಜುಗೊಳಿಸುವಿಕೆಯು ಮಂಚೂಣಿಯಲ್ಲಿರುವುದು\
- ಶಿಕ್ಷಕರ ಕೆಲಸಗಳಲ್ಲಿ ಕಾರ್ಯಕ್ಷಮತೆಯನ್ನು ಹೆಚ್ಚಿಸಲು ಬೆಂಬಲ ನೀಡುವುದು
- ಶಿಕ್ಷಕರ ವೃತ್ತಿ ತತ್ಪರತೆಯ ಅಭಿವೃದ್ಧಿಯನ್ನು ಮುನ್ನಡೆಸುವುದು
- ತಿದ್ದುವುದು ಮತ್ತು ಶಿಕ್ಷಣ ನೀಡುವುದು
- ನಿಮ್ಮ ಶಾಲೆಯಲ್ಲಿ ಪರಿಣಾಮಕಾರಿಯಾದ ಕಲಿಕೆಯ ಸಂಸ್ಕೃತಿಯನ್ನು ಅಭಿವೃದ್ಧಿಪಡಿಸುವುದು
- ಶಾಲೆಯಲ್ಲಿ ಎಲ್ಲವನ್ನೂ ಆಂತರೀಕರಣಗೊಳಿಸುವುದನ್ನು ಉತ್ತೇಜಿಸುವುದು
- ನಿಮ್ಮ ಶಾಲೆಯಲ್ಲಿ ತಂತ್ರಜ್ಞನದ ಬಳಕೆಯಲ್ಲಿ ಮುನ್ನೆಡೆ

# ಸಂಪನ್ಮೂಲಗಳು

## ಸಂಪನ್ಮೂಲ1: ನಿಮ್ಮಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ವಿಮರ್ಶಿಸುವುದು

ಪಟ್ಟಿ ಆರ್1.1 **ನಿಮ್ಮಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ವಿಮರ್ಶೆ– ನಮೂನೆ (ನೋಡಿ ಚಟುವಟಿಕೆ 1)**

| ಸಂಪನ್ಮೂಲ | ಶಾಲೆಯ ಕಟ್ಟಡದೊಳಗೆ ಮತ್ತು ಬಯಲಿನಲ್ಲಿ ಲಭ್ಯವಿರುವುದು | ಶಾಲೆಯ ಪರಿಮಿತಿಯ ಹೊರಗೆ ಲಭ್ಯವಿರುವುದು |
|---|---|---|
| | | |

| | | |
|---|---|---|
| | | |
| | | |
| | | |
| | | |
| | | |

## ಸಂಪನ್ಮೂಲಗಳು2: ಸ್ಥಳೀಯ ಸಂಪನ್ಮೂಲಗಳ ಬಳಕೆ

ಕೇವಲ ಪಠ್ಯ ಪುಸ್ತಕಗಳನ್ನು ಮಾತ್ರವಲ್ಲ ಹಲವಾರು ಕಲಿಕೆಯ ಸಂಪನ್ಮೂಲಗಳನ್ನು ಬೋಧನೆಯಲ್ಲಿ ಬಳಸಿಕೊಳ್ಳಬಹುದು. ವಿವಿಧ ಜ್ಞಾನೇಂದ್ರೀಯಗಳನ್ನು ಬಳಸಿಕೊಂಡು ಕಲಿಯಲು ಹೇಳಬಹುದು (ದೃಶ್ಯ, ಶ್ರಾವ್ಯ, ಸ್ಪರ್ಶ ರುಚಿ) ವಿದ್ಯಾರ್ಥಿಗಳ ಕಲಿಕೆಗೆ ಇರುವ ಹಲವಾರು ಮಾರ್ಗಗಳನ್ನು ಎತ್ತಿ ಹಿಡಿದಂತಾಗುತ್ತದೆ. ನಿಮ್ಮ ಸುತ್ತಮುತ್ತಲೂ ಸಂಪನ್ಮೂಲಗಳು ಇರಬಹುದು ಅವುಗಳನ್ನು ತರಗತಿಯಲ್ಲಿ ಬಳಸಿಕೊಳ್ಳಿ, ಮತ್ತು ಅದು ನಿಮ್ಮ ವಿದ್ಯಾರ್ಥಿಗಳಿಗೆ ಕಲಿಕೆಗೆ ನೆರವಾಗಬಹುದು. ಯಾವುದೇ ಶಾಲೆಯು ಸ್ವಲ್ಪಮಟ್ಟಿಗೆ ಅಥವಾ ಯಾವುದೇ ವೆಚ್ಚವಿಲ್ಲದೆ ತನ್ನದೇ ಆದ ಕಲಿಕೆಯ ಸಂಪನ್ಮೂಲಗಳನ್ನು ಹುಟ್ಟು ಹಾಕಿಕೊಳ್ಳಬಹುದು. ಸ್ಥಳೀಯವಾಗಿ ಈ ವಸ್ತುಗಳನ್ನು ಕಂಡುಕೊಳ್ಳುವುದು, ವಿದ್ಯಾರ್ಥಿಗಳ ಕಲಿಕೆ ಮತ್ತು ಪಠ್ಯ ಚಟುವಟಿಕೆಗಳ ನಡುವೆ ಸಂಪರ್ಕವನ್ನು ಕಲ್ಪಿಸುವುದು ಮುಖ್ಯವಾಗುತ್ತದೆ.

ನಿಮ್ಮ ಪಕ್ಕದಲ್ಲೇ ಇರುವ ಜನರಲ್ಲಿ ಹಲವಾರು ವಿಷಯಗಳ ಬಗ್ಗೆ ಪರಿಣತಿಯಿರುವವರು ಸಿಗಬಹುದು; ಅಲ್ಲದೆ ಹಲವು ವಿಧದ ನೈಸರ್ಗಿಕ ಸಂಪನ್ಮೂಲಗಳಿರುವುದು ನಿಮಗೆ ತಿಳಿದಿರಬಹುದು. ಇದು ಸಮುದಾಯದೊಂದಿಗೆ ಸಂಪರ್ಕ ಕಲ್ಪಿಸಲು ಸಹಾಯವಾಗಬಹುದು, ಇದರ ಮೌಲ್ಯಗಳನ್ನು ಪ್ರದರ್ಶಿಸಿ, ವಿದ್ಯಾರ್ಥಿಗಳಿಗೆ ತಮ್ಮ ವಾತಾವರಣದಲ್ಲಿರುವ ಶ್ರೀಮಂತಿಕೆ ಮತ್ತು ವಿಭಿನ್ನತೆಯ ಬಗ್ಗೆ ಗಮನಿಸಲು ಪ್ರೇರೇಪಿಸಿ. ಮತ್ತು ಅಗತ್ಯವಾಗಿ ವಿದ್ಯಾರ್ಥಿಗಳ ಕಲಿಕೆಗೆ ಸಮಗ್ರವಾದ ದೃಷ್ಟಿಕೋನವನ್ನು ಅಳವಡಿಸಿಕೊಳ್ಳುವತ್ತ ಕೆಲಸ ಮಾಡಿ–ಅದು ಶಾಲೆಯ ಒಳಗೆ ಮತ್ತು ಹೊರಗೆ ಕಲಿಕೆ.

## ನಿಮ್ಮ ತರಗತಿಯನ್ನು ಅತ್ಯುತ್ತಮವಾಗಿಸುವುದು

ಜನರು ತಮ್ಮ ಮನೆಗಳನ್ನು ಸಾಧ್ಯವಾದಷ್ಟೂ ಆಕರ್ಷಣೀಯವಾಗಿಸಲು ಶ್ರಮಪಡುತ್ತಾರೆ. ನೀವು ನಿಮ್ಮ ವಿದ್ಯಾರ್ಥಿಗಳು ಕಲಿಯಬೇಕೆನ್ನುವ ವಾತವರಣದ ಬಗ್ಗೆ ಯೋಚಿಸುವುದು ಒಳ್ಳೆಯದು. ನಿಮ್ಮ ತರಗತಿ ಮತ್ತು ಶಾಲೆ ಕಲಿಕೆಗೆ ಸೂಕ್ತವಾದ ಸ್ಥಳ ಮತ್ತು ಸಕಾರಾತ್ಮಕ ಪರಿಣಾಮವನ್ನು ಬೀರುವಂತೆ ಮಾಡಲು ನೀವು ಏನು ಬೇಕಾದರೂ ಮಾಡಬಹುದು. ನಿಮ್ಮ ವಿದ್ಯಾರ್ಥಿಗಳಿಗೆ ತರಗತಿಯನ್ನು ಆಸಕ್ತಿಯುತವಾಗಿ ಮತ್ತು ಆಕರ್ಷಣೀಯವಾಗಿ ಮಾಡಲು ಹಲವು ರೀತಿಗಳಿವೆ. ಉದಾಹರಣೆಗೆ ನೀವು ಮಾಡಬಹುದು:

- ಹಳೆಯ ಪತ್ರಿಕೆಗಳು ಮತ್ತು ಮಾಹಿತಿ ಪತ್ರಗಳಿಂದ ಭಿತ್ತಿ ಪತ್ರಗಳ ತಯಾರಿ
- ವಸ್ತುಗಳು ಮತ್ತು ಕಲಾಕೃತಿಗಳನ್ನು ತರುವುದು
- ನಿಮ್ಮ ವಿದ್ಯಾರ್ಥಿಗಳ ಕಲೆಯ ಪ್ರದರ್ಶನ
- ತರಗತಿಯಲ್ಲಿ ಪ್ರದರ್ಶಿಸಲು ಅನುಕೂಲವಾಗುವಂತೆ ಮತ್ತು ಹೊಸ ಕಲಿಕೆ ಹಾಗೂ ಕುತೂಹಲ ಮೂಡಿಸುವಂತೆ ಬದಲಾಯಿಸುವುದು

## ಸ್ಥಳೀಯ ಪರಿಣತಿಯನ್ನು ನಿಮ್ಮ ತರಗತಿಗಳಲ್ಲಿ ಬಳಸಿಕೊಳ್ಳುವುದು

ನೀವು ಗಣಿತದ ವಿಷಯದಲ್ಲಿ ಹಣ ಅಥವಾ ಸಂಖೆಗಳ ಬಗ್ಗೆ ಕೆಲಸ ಮಾಡುತ್ತಿದ್ದರೆ, ನೀವು ಮಾರುಕಟ್ಟೆಯಲ್ಲಿರುವ ವ್ಯಾಪಾರಿ ಅಥವಾ ಉಡುಪು ಸಿದ್ಧಪಡಿಸುವವರನ್ನು ತರಗತಿಗೆ ಬಂದು ತಮ್ಮ ಕೆಲಸಗಳಲ್ಲಿ ಗಣಿತವನ್ನು ಹೇಗೆ ಬಳಸುತ್ತಾರೆಂದು ವಿವರಿಸಲು ಹೇಳಿ. ಇದಕ್ಕೆ ಪರ್ಯಾಯವಾಗಿ ನೀವು ವಿಧಾನಗಳು ಮತ್ತು ಕಲೆಯಲ್ಲಿನ ಆಕೃತಿಗಳ ಬಗ್ಗೆ ಹೇಳುತ್ತಿದ್ದರೆ, ಮೆಹಂದಿ ಹಾಕುವವರನ್ನು ಕರೆದು ವಿವಿಧ ಆಕಾರಗಳು, ವಿನ್ಯಾಸಗಳು, ಸಾಂಪ್ರದಾಯಿಕ ಶೈಲಿಗಳು ಮತ್ತು ತಂತ್ರಗಳ ಬಗ್ಗೆ ವಿವರಿಸಲು ತಿಳಿಸಿ. ಪ್ರತಿಯೊಬ್ಬರಿಗೂ ಶೈಕ್ಷಣಿಕ ಗುರಿ ಸ್ಪಷ್ಟವಾಗಿದ್ದಾಗ ಮತ್ತು ಸಮಯಕ್ಕೆ ತಕ್ಕಂತೆ ಹಂಚಿಕೆಯಾಗಿರುವ ನಿರೀಕ್ಷೆಗಳಿದ್ದಾಗ ಅತಿಥಿಗಳನ್ನು ಶಾಲೆಗೆ ಆಹ್ವಾನಿಸುವುದು ಒಳ್ಳೆಯದಾಗುತ್ತದೆ.

ನಿಮ್ಮ ಶಾಲಾ ಸಮುದಾಯದಲ್ಲೇ ಪರಿಣಿತರು ಇರಬಹುದು. ( ಅಡಿಗೆ ಮಾಡುವವರು ಅಥವಾ ಮಕ್ಕಳನ್ನು ನೋಡಿಕೊಳ್ಳುವವರು) ಅವರನ್ನು ವಿದ್ಯಾರ್ಥಿಗಳು ತಮ್ಮ ಕಲಿಕೆಗೆ ಸಂಬಂಧಿಸಿದಂತೆ ಸಂದರ್ಶಿಸಿರಬಹುದು. ಉದಾ: ಅಡಿಗೆಯಲ್ಲಿ ಬಳಸುವ ಅಳತೆ ಅಥವಾ ಶಾಲಾ ಕಟ್ಟಡ ಮತ್ತು ಬಯಲಿನ ಮೇಲೇ ವಾತಾವರಣದಿಂದಾಗುವ ಪರಿಣಾಮಗಳು.

## ಹೊರಗಿನ ಪರಿಸರದ ಬಳಕೆ

ತರಗತಿಯ ಹೊರಗೆ ವಿಭಿನ್ನ ರೀತಿಯ ಸಂಪನ್ಮೂಲಗಳಿದ್ದು ಅವುಗಳನ್ನು ಪಾಠಗಳಲ್ಲಿ ಬಳಸಿಕೊಳ್ಳಬಹುದು. ನೀವು ( ನಿಮ್ಮ ತರಗತಿಯಲ್ಲಿರುವವರನ್ನು ಸಂಗ್ರಹಿಸಲು ಹೇಳಿ) ವಸ್ತುಗಳಾದ ಎಲೆಗಳು, ಜೇಡಗಳು, ಕೀಟಗಳು, ಕಲ್ಲುಗಳು ಅಥವಾ ಮರಗಳನ್ನು ಸಂಗ್ರಹಿಸಬಹುದು. ಈ ಸಂಪನ್ಮೂಲಗಳನ್ನು ತರಗತಿಗೆ ತಂದು ಪಾಠಗಳಿಗೆ ಸಂಬಂಧಿಸಿದಂತೆ ತರಗತಿಯನ್ನು ಆಸಕ್ತಿದಾಯಕಗೊಳಿಸಬಹುದು.

ಚರ್ಚೆಗೆ ಕೆಲವು ವಸ್ತುಗಳನ್ನು ತರಬಹುದು ಅಥವಾ ವರ್ಗೀಕರಣದಂತಹ ಚಟುವಟಿಕಯ ಪ್ರಯೋಗವನ್ನು ಮಾಡಬಹುದು. ಅಥವಾ ಜೀವವಿರುವ ಮತ್ತು ಜೀವವಿಲ್ಲದ ವರ್ಗೀಕರಣ. ಬಸ್‌ನ ವೇಳಾಪಟ್ಟಿ ಅಥವಾ ಜಾಹೀರಾತುಗಳಂತಜ ಸಿದ್ಧವಾದ ಮತ್ತು ಸ್ಥಳೀಯ ಸಮುದಾಯಕ್ಕೆ ಸಂಬಂಧಿಸಿದಂತ ಸಂಪನ್ಮೂಲಗಳಿವೆ– ಇವುಗಳನ್ನು ಕಲಿಕೆಯ ಸಂಪನ್ಮೂಲವನ್ನಾಗಿಸಬಹುದು; ಪದಗಳನ್ನು ಗುರುತಿಸುವುದು, ಗುಣಗಳನ್ನು ಹೋಲಿಸುವುದು ಅಥವಾ ಪ್ರವಾಸದ ಸಮಯವನ್ನು ಲೆಕ್ಕ ಹಾಕುವುದು.

ಹೊರಗಿನಿಂದ ವಸ್ತುಗಳನ್ನು ತರಗತಿಗೆ ತರಬಹುದು– ಆದರೆ ಹೊರಗೆ ಹೋಗಿ ನೋಡುವುದರಿಂದ ಹೊರಭಾಗವು ತರಗತಿಯ ವಿಸ್ತೃತ ಭಾಗವಾಗುತ್ತದೆ. ಸಾಮಾನ್ಯವಾಗಿ ತರಗತಿಯಿಂದ ಹೊರಹೋಗಿ ಕಲಿಯಲು ಸಾಕಷ್ಟು ಅವಕಾಶಗಳಿವೆ ಮತ್ತು ಎಲ್ಲಾ ವಿದ್ಯಾರ್ಥಿಗಳು ಸುಲಭವಾಗಿ ಅವುಗಳನ್ನು ನೋಡಬಹುದು. ನೀವು ನಿಮ್ಮ ತರಗತಿಯನ್ನು ಕಲಿಕೆಗಾಗಿ ಹೊರಗೆ ಕರೆದುಕೊಂಡು ಹೋದಾಗ ಇಂತಹ ಚಟುವಟಿಕೆಗಳನ್ನು ಮಾಡಬಹುದು:

- ದೂರವನ್ನು ಅಳೆಯುವುದು ಮತ್ತು ಅಂದಾಜುಗೊಳಿಸುವುದು
- ವೃತ್ತದೊಳಗಿನ ಕೇಂದ್ರ ಬಿಂದುವಿನಿಂದ ಯಾವುದೇ ದಿಕ್ಕಿಗೆ ಅಳೆದರೂ ಅಂತರ ಒಂದೇ ಆಗಿರುತ್ತದೆ
- ದಿನದ ಬೇರೆ ಬೇರೆ ಸಮಯದಲ್ಲಿ ನೆರಳಿನಉದ್ದವನ್ನು ದಾಖಲಿಸುವುದು
- ಸಂಜ್ಞೆಗಳು ಮತ್ತು ಸೂಚನೆಗಳನ್ನು ಓದುವುದು
- ಸಂದರ್ಶನಗಳು ಮತ್ತು ಸಮೀಕ್ಷೆಗಳನ್ನು ನಡೆಸುವುದು
- ಸೌರ ಪ್ಯಾನಲ್‌ಗಳನ್ನು ಗುರುತಿಸುವುದು
- ಬೆಳೆಗಳ ಬೆಳವಣಿಗೆ ಮತ್ತು ಮಳೆಯನ್ನು ದಾಖಲಿಸುವುದು

ಹೊರಗಿನ ಕಲಿಕೆಯು ವಾಸ್ತವಿಕತೆ ಮತ್ತು ತಮ್ಮದೇ ಆದ ಅನುಭವಗಳನ್ನು ಆಧರಿಸಿರುತ್ತದೆ.ಮತ್ತು ಇದನ್ನು ಇತರ ಸಂದರ್ಭಗಳಿಗೆ ವರ್ಗಾಯಿಸಬಹುದು.

ಹೊರಗೆ ಕೆಲಸ ಮಾಡುವುದು ಎಂದರೆ, ಶಾಲೆಯಿಂದ ಹೊರಗೆ ಹೋಗುವುದು, ಹಾಗಾಗಿ ಶಾಲಾ ನಾಯಕರ ಅನುಮತಿ ಪಡೆದುಕೊಳ್ಳಬೇಕು, ಸಮಯವನ್ನು ಹೊಂದಿಸುವುದು, ಸುರಕ್ಷತೆಯನ್ನು ಪರೀಕ್ಷಿಸಿ, ಎಲ್ಲಾ ವಿದ್ಯಾರ್ಥಿಗಳಿಗೆ ನಿಯಮಗಳನ್ನು ಸ್ಪಷ್ಟವಾಗಿ ತಿಳಿಸಿ. ನೀವು ಮತ್ತು ನಿಮ್ಮ ವಿದ್ಯಾರ್ಥಿಗಳಿಗೆ ಏನನ್ನು ಕಲಿಯಲು ಹೊರಟ್ಟಿದ್ದೀರಾ ಎನ್ನುವುದನ್ನು ಸ್ಪಷ್ಟಪಡಿಸಿ.

### ಸಂಪನ್ಮೂಲಗಳ ಅಳವಡಿಕೆ

ನೀವು ಪ್ರಸ್ತುತ ಇರುವ ಸಂಪನ್ಮೂಲಗಳನ್ನು ವಿದ್ಯಾರ್ಥಿಗಳ ಅಗತ್ಯತೆಗೆ ತಕ್ಕಂತೆ ಅಳವಡಿಸಿಕೊಳ್ಳಬೇಕು. ಈ ಬದಲಾವಣೆಗಳು ಸಣ್ಣದಾಗಿರಬಹುದು ಆದರೆ ಭಾರೀ ವ್ಯತ್ಯಾಸವನ್ನು ಮಾಡುತ್ತದೆ, ವಿಶೇಷವಾಗಿ ನೀವು ಕಲಿಕೆಯನ್ನು ತರಗತಿಯಲ್ಲಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಮಾಡಲು ಪ್ರಯತ್ನಿಸುತ್ತಿರುವಾಗ. ನೀವು ಹೀಗೆ ಮಾಡಬಹುದು, ಉದಾ; ಸ್ಥಳದ ಹೆಸರು ಮತ್ತು ಜನರ ಹೆಸರುಗಳು ಒಂದು ರಾಜ್ಯಕ್ಕೆ ಸಂಬಂಧಿಸಿದ್ದಾದರೆ ಅವುಗಳನ್ನು ಬದಲಾಯಿಸಿ ಅಥವಾ ಹಾಡಿನಲ್ಲಿರುವ ವ್ಯಕ್ತಿಗಳ ಲಿಂಗವನ್ನು ಬದಲಾಯಿಸಿ, ಅಥವಾ ವಿಕಲಾಂಗತೆಯಿರುವ ಮಗುವಿನ ಕಥೆಯನ್ನು ಪರಿಚಯಿಸುವುದು. ಹೀಗೆ ಸಂಪನ್ಮೂಲಗಳನ್ನು ಆಂತರೀಕರಿಸಿ ಮತ್ತು ನಿಮ್ಮ ತರಗತಿಗೆ ಮತ್ತು ಅವರ ಕಲಿಕೆಗೆ ಸೂಕ್ತವಾಗಿರುವಂತೆ ಮಾಡುವುದಾಗಿದೆ.

ನೀವು ಸಂಪನ್ಮೂಲವುಳ್ಳವರಾಗಿರಲು ನಿಮ್ಮ ಸಹದ್ಯೋಗಿಗಳೊಂದಿಗೆ ಕೆಲಸ ಮಾಡಿ. ಸಂಪನ್ಮೂಲಗಳನ್ನು ಹುಟ್ಟಿಹಾಕಿಕೊಳ್ಳಲು ಮತ್ತು ಅಳವವಡಿಸಿಕೊಳ್ಳಲು ನಿಮ್ಮಲ್ಲಿ ಹಲವಾರು ಕೌಶಲ್ಯಗಳಿವೆ. ಒಬ್ಬ ಸಹದ್ಯೋಗಿಗೆ ಹಾಡುವ ಕೌಶಲ್ಯವಿದ್ದರೆ, ಇನ್ನೊಬ್ಬರಿಗೆ ಸೂತ್ರದ ಗೊಂಬೆಗಳ ತಯಾರಿಕೆ, ಅಥವಾ ಹೊರಗೆ ವಿಜ್ಞನದ ಚಟುವಟಿಕೆಗಳನ್ನು ಸಂಘಟಿಸುವುದು. ನಿಮ್ಮ ಶಾಲೆಯಲ್ಲಿನ ಎಲ್ಲಾ ಕ್ಷೇತ್ರಗಳಲ್ಲೂ ಶ್ರೀಮಂತ ಕಲಿಕೆಯ ವಾತಾವರಣವನ್ನು ಹುಟ್ಟು ಹಾಕಲು ನಿಮ್ಮ ತರಗತಿಯಲ್ಲಿ ಬಳಸುವ ಎಲ್ಲ ಸಂಪನ್ಮೂಲಗಳನ್ನು ಹಂಚಿಕೊಳ್ಳುವ ಮೂಲಕ ನಿಮ್ಮ ಸಹದ್ಯೋಗಿಗಳಿಗೆ ಸಹಾಯ ಮಾಡಿ.

# References/bibliography

*Encouraging book talk in the school library*, Open University OpenLearn unit. Available from: http://www.open.edu/openlearn/education/encouraging-book-talk-the-school-library/content-section-0 (accessed 9 August 2014).

Elmore, R.F. (1979) 'Backward mapping: implementation research and policy decisions', *Political Science Quarterly*, vol. 94, no. 4 (winter 1979/80), pp. 601–16.

*Enhancing pupil learning on museum visits*, Open University OpenLearn unit. Available from: http://www.open.edu/openlearn/education/enhancing-pupil-learning-on-museum-visits/content-section-1 (accessed 9 August 2014).

*Teachers sharing resources online*, Open University OpenLearn unit. Available from: http://www.open.edu/openlearn/education/teachers-sharing-resources-online/content-section-0 (accessed 9 August 2014).

*TESSA: using local resources – Track 1*, Open University OpenLearn unit. Available from: http://www.open.edu/openlearn/education/tessa-using-local-resources (accessed 9 August 2014).

# Acknowledgements

This content is made available under a Creative Commons Attribution-ShareAlike licence (http://creativecommons.org/licenses/by-sa/3.0/), unless identified otherwise. The licence excludes the use of the TESS-India, OU and UKAID logos, which may only be used unadapted within the TESS-India project.

Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.

Video (including video stills): thanks are extended to the teacher educators, headteachers, teachers and students across India who worked with The Open University in the productions.